ನವಸಾಕ್ಷರ ಪುಸ್ತಕ ಮಾಲೆ ೧೦೫

ಕರ್ನಾಟಕದ ಜಿಲ್ಲೆಗಳು

ಎಲ್. ಲಕ್ಷ್ಮೀದೇವಿ



ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಲೆ

ಯ

ಎಸ್.

ಾಲಯ

ರು

ಎಚ್. ನರಸಿಂಹಯ್ಯ
ಜಿ. ನಾರಾಯಣ
ಎಲ್. ಎಸ್. ಶೇಷಗಿರಿರಾವ್
ಶಾಂತರಸ
ಕೆ. ವಿ. ಸುಬ್ಬಣ್ಣ
ಗೊ. ರು. ಚನ್ನಬಸಪ್ಪ
ಟಿ. ಎಸ್. ಶಂಕರ್
ಶಿವಶಂಕರ ಹಿರೇಮಠ
ಆರ್. ಎಸ್. ರಾಜಾರಾಮ್
ಶ್ರೀಮತಿ ಎಲ್. ಜಿ. ಸುಮಿತ್ರ

ಸಂಪಾದಕ ಸಮಿತಿ

ಶ್ರೀಯುತರಾದ
ಎಸ್. ಜಿ. ನಾಗಲೋಟಿಮಠ
ಕೆ. ವಿ. ನಾರಾಯಣ
ಪುರುಷೋತ್ತಮ ಬಿಳಿಮಲೆ
ಕರೀಗೌಡ ಬೀಚನಹಳ್ಳಿ
ಅಮೃತ ಸೋಮೇಶ್ವರ
ಸಿ. ಆರ್. ಚಂದ್ರಶೇಖರ್
ಬಿ. ಎ. ಶ್ರೀಧರ
ಲಿಂಗದೇವರು ಹಳೆಮನೆ
ಭ. ಮಲ್ಲಿಕಾರ್ಜುನ
ಮಹಾಬಲೇಶ್ವರರಾವ್
ಭಕ್ತಪ್ರಿಯ
ಎಂ. ಪಿ. ಪರಮಶೇಖರಯ್ಯ
ಶ್ರೀಮತಿ ಉಷಾ ರಾಂಕುಮಾರ್

ಲೋಕಶಿಕ್ಷಣ ನಿರ್ದೇಶನಾಲಯ
ನವಸಾಕ್ಷರ ಪುಸ್ತಕ ಮಾಲೆ – ೧೦೫

ಕರ್ನಾಟಕದ ಜಿಲ್ಲೆಗಳು

ಎಲ್. ಲಕ್ಷ್ಮೀದೇವಿ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ–೫೮೩ ೨೧೧

KARNATAKADA JILLEGALU : By L.Lakshmidevi. Published by The Director of Prasaranga, Kannada University, Hampi - 583 211, KARNATAKA.
First Impression 1994, Pp.ii + 26, Rs. 8.00.

ಸಂಯೋಜನಾಧಿಕಾರಿ
ಡಾ.ಎಚ್.ಎಸ್.ಶ್ರೀಮತಿ
ಪಠ್ಯ ಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ — ೫೮೩ ೨೧೧

ಮುಖಪುಟ ವಿನ್ಯಾಸ
ಕೆ.ಮಠಾಳಿ


ಬೆಲೆ : ರೂ. ೮.೦೦

ಮುದ್ರಕರು
ವಿನಾಯಕ ಆಫ್‌ಸೆಟ್ ಪ್ರಿಂಟರ್‍ಸ್
8/1, ಮಾರೇನಹಳ್ಳಿ, 1ನೇ ಕ್ರಾಸ್, 23ನೇ ಮೇನ್,
ಜೆ. ಪಿ. ನಗರ, ಬೆಂಗಳೂರು-560 078.
ಫೋನ್: 642102

ಕರ್ನಾಟಕದ ಜಿಲ್ಲೆಗಳು

ಭಾರತದ ಇಪ್ಪತ್ತೈದು ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ಇಲ್ಲಿನ ಜನರ ಆಡುಭಾಷೆ ಕನ್ನಡ. ಬೆಂಗಳೂರು ಕರ್ನಾಟಕದ ರಾಜಧಾನಿಯಾಗಿದೆ. ಹಿಂದೆ ಕಾವೇರಿಯಿಂದ ಗೋದಾವರಿಯವರೆಗೂ ಕರ್ನಾಟಕದ ಪ್ರದೇಶ ಹಬ್ಬಿತ್ತು. ಕರುನಾಡು, ಕುಂತರ, ಕರ್ನಾಟ, ಕನ್ನಾಡ, ಕರ್ನಾಟಕ ಎಂಬ ಹೆಸರುಗಳು ಈ ಪ್ರದೇಶಕ್ಕೆ ಇದ್ದವು. ಇದು ಬೇರೆ ಬೇರೆ ಕಾಲಗಳಲ್ಲಿ ಅನೇಕ ರಾಜರ ಆಳ್ವಿಕೆಯಿಂದ ಹಲವು ವಿಭಾಗಗಳಾಗಿ ವಿಂಗಡಣೆಯಾಯಿತು.

ಬ್ರಿಟಿಷರ ಆಡಳಿತದ ಕಾಲದಲ್ಲೂ ಕರ್ನಾಟಕದ ಬಹಳಷ್ಟು ಪ್ರದೇಶ ಮುಂಬೈ, ಮದ್ರಾಸ್ ಮತ್ತು ಹೈದರಾಬಾದ್ ಪ್ರಾಂತ್ಯಗಳೊಂದಿಗೆ ಹಂಚಿಕೆಯಾಗಿತ್ತು. ಭಾರತಕ್ಕೆ ಸ್ವಾತಂತ್ರ್ಯ ದೊರೆತ ನಂತರ ಸಂವಿಧಾನದ ಅನುಕೂಲಕ್ಕಾಗಿ ರಾಜ್ಯಗಳ ವಿಂಗಡಣೆಯಾಯಿತು. ಸಾವಿರದ ಒಂಬೈನೂರಾ ಐವತ್ತಾರರ ನವೆಂಬರ್ ಒಂದನೇ ತಾರೀಖಿನೆಂದು ಕನ್ನಡ ಮಾತನಾಡುವ ಜನರಿರುವ ಪ್ರದೇಶವನ್ನು ಮೈಸೂರು ರಾಜ್ಯ ಎಂಬ ಹೆಸರಿನಿಂದ ಕರೆದರು. ಇದನ್ನು ಕರ್ನಾಟಕದ ಏಕೀಕರಣ ಎನ್ನುತ್ತಾರೆ.



ಬೀದರ್
ಗುಲ್ಬರ್ಗ
ಬಿಜಾಪುರ್
ಬೆಳಗಾಂ
ರಾಯಚೂರ್
ಗೋವ
ಧಾರವಾಡ
ಬಳ್ಳಾರಿ
ಕಾರ್ವಾರ್
ಚಿತ್ರದುರ್ಗ
ಶಿವಮೊಗ್ಗ
ಚಿಕ್ಕಮಗಳೂರು
ತುಮಕೂರು
ಕೋಲಾರ
ಬೆಂಗಳೂರು
ಮಂಗಳೂರು
ಹಾಸನ
ಮಂಡ್ಯ
ಕೊಡಗು
ಮೈಸೂರು

ಈ ಸಂದರ್ಭದಲ್ಲಿ ಮೈಸೂರು ರಾಜ್ಯಕ್ಕೆ ಕೆಲವು ಪ್ರಾಂತ್ಯಗಳು ಸೇರಿದವು. ಹಾಗೂ ಕೆಲವು ಪ್ರದೇಶಗಳು ಬೇರೆ ರಾಜ್ಯಗಳಿಗೂ ಸೇರಿದವು.

ರಾಜ್ಯದ ಭೂ ಪ್ರದೇಶವನ್ನು ಕರಾವಳಿ, ಮಲೆನಾಡು ಮತ್ತು ಬಯಲು ಪ್ರದೇಶವೆಂದು ಮೂರು ಭಾಗಗಳಾಗಿ ವಿಂಗಡಿಸಬಹುದು.

ಕರ್ನಾಟಕದಲ್ಲಿ ೨೦ ಜಿಲ್ಲೆಗಳಿವೆ. ವಿಭಾಗಗಳು ಮತ್ತು ಜಿಲ್ಲೆಗಳು ಹೀಗಿವೆ.

(ಅ)ಬೆಂಗಳೂರು ವಿಭಾಗದಲ್ಲಿ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆ, ಕೋಲಾರ, ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಿವೆ.

ಆ)ಮೈಸೂರು ವಿಭಾಗದಲ್ಲಿ ಮೈಸೂರು, ಮಂಡ್ಯ, ಕೊಡಗು, ಹಾಸನ, ದಕ್ಷಿಣಕನ್ನಡ ಮತ್ತು ಚಿಕ್ಕಮಗಳೂರು ಜಿಲ್ಲೆಗಳಿವೆ.

ಇ)ಬೆಳಗಾವಿ ವಿಭಾಗದಲ್ಲಿ ಬೆಳಗಾವಿ, ಬಿಜಾಪುರ, ಧಾರವಾಡ, ಉತ್ತರ ಕನ್ನಡ ಜಿಲ್ಲೆಗಳಿವೆ.

ಈ)ಗುಲ್ಬರ್ಗಾ ವಿಭಾಗದಲ್ಲಿ ಗುಲ್ಬರ್ಗ, ರಾಯಚೂರು, ಬಳ್ಳಾರಿ, ಬೀದರ್ ಜಿಲ್ಲೆಗಳಿವೆ.

ಈಗ ಕರ್ನಾಟಕದ ಜಿಲ್ಲೆಗಳ ಪರಿಚಯವನ್ನು ನೋಡೋಣ:

೧. ಬೆಂಗಳೂರು ನಗರ ಜಿಲ್ಲೆ

ಬೆಂಗಳೂರು ನಗರ ಜಿಲ್ಲೆಯು ಕರ್ನಾಟಕದ ರಾಜಧಾನಿಯೂ ಹೌದು. ಈ ಜಿಲ್ಲೆಯನ್ನು (೧) ಬೆಂಗಳೂರು ಉತ್ತರ ತಾಲ್ಲೂಕು (೨) ಬೆಂಗಳೂರು

ದಕ್ಷಿಣ ತಾಲ್ಲೂಕು (೩) ಆನೇಕಲ್ಲು ತಾಲ್ಲೂಕು ಎಂದು ಮೂರು ತಾಲ್ಲೂಕುಗಳಾಗಿ ವಿಂಗಡಿಸಿದ್ದಾರೆ.

ಕರ್ನಾಟಕದ ಆಗ್ನೇಯ ಭಾಗದಲ್ಲಿರುವ ಈ ಜಿಲ್ಲೆಯಲ್ಲಿ ಹಿತಕರವಾದ ಹವಾಮಾನವಿದೆ. ವ್ಯವಸಾಯಕ್ಕೆ ಯೋಗ್ಯವಾದ ಭೂಮಿಯಿದೆ. ನಗರದ ಬೆಳವಣಿಗೆಯಿಂದ ಕಟ್ಟಡಗಳು ಮತ್ತು ಕೈಗಾರಿಕೆಗಳಿಗೆ ಹೆಚ್ಚು ಭೂಮಿಯನ್ನು ಬಳಸಿಕೊಳ್ಳಲಾಗುತ್ತಿದೆ. ರಾಗಿ, ಭತ್ತ, ಶೇಂಗಾ, ದ್ವಿದಳ ಧಾನ್ಯಗಳು, ಹೂ ಮತ್ತು ತರಕಾರಿಗಳನ್ನು ಜಿಲ್ಲೆಯ ಕೆಲವು ಭಾಗಗಳಲ್ಲಿ ಬೆಳೆಯುತ್ತಾರೆ.

ಬೆಂಗಳೂರಿಗೆ ಮೊದಲು ಬೆಂದಕಾಳೂರು ಎಂಬ ಹೆಸರು ಇತ್ತು. ಈಗ ಇಪ್ಪತ್ತು ಲಕ್ಷ ಜನಸಂಖ್ಯೆಯನ್ನು ಹೊಂದಿರುವ ಬೆಂಗಳೂರು ಕೈಗಾರಿಕೆಗಳಿಗೆ ಪ್ರಸಿದ್ಧಿಯಾಗಿದೆ. ಆಕಾಶವಾಣಿ ಮತ್ತು ದೂರದರ್ಶನ ಕೇಂದ್ರಗಳಿವೆ. ವಿಮಾನ ನಿಲ್ದಾಣ, ರೈಲ್ವೆ ನಿಲ್ದಾಣ, ಮತ್ತು ಬಸ್ ನಿಲ್ದಾಣಗಳ ಅಚ್ಚುಕಟ್ಟಾದ ಸೌಲಭ್ಯವಿದೆ. ನಮ್ಮ ರಾಜ್ಯ ಸರ್ಕಾರದ ಆಡಳಿತ ಕೇಂದ್ರವಾದ ವಿಧಾನಸೌಧ ಇರುವುದೂ ಬೆಂಗಳೂರಿನಲ್ಲೇ. ಅಲ್ಲದೆ ರಾಜ್ಯದ ಉಚ್ಚನ್ಯಾಯಾಲಯ (ಹೈಕೋರ್ಟ್) ಸಹ ಇಲ್ಲಿಯೇ ಇದೆ.

ಶಿಕ್ಷಣ ಸೌಲಭ್ಯ, ಉದ್ಯೋಗ, ವ್ಯಾಪಾರ, ಕೈಗಾರಿಕೆಗಳಿಂದ ಬೆಂಗಳೂರು ಜನರನ್ನು ಆಕರ್ಷಿಸುತ್ತದೆ. ರಾಜ್ಯದ ಹೊರಗಿನಿಂದ ಬಂದು ನೆಲೆಸುತ್ತಿರುವವರ ಸಂಖ್ಯೆ ದಿನೇ-ದಿನೇ ಹೆಚ್ಚುತ್ತಿದೆ. ಕೈಗಾರಿಕೆಗಳು ಮತ್ತು ವಾಹನಗಳಿಂದ ಇಲ್ಲಿನ ಪರಿಸರ ಮಲಿನವಾಗುತ್ತಿದೆ. ಜೊತೆಗೆ ಅಭಿವೃದ್ಧಿಯ ಸಾಧನೆಯೂ ಬೆಂಗಳೂರು ಜಿಲ್ಲೆಗಿದೆ.

೨. ಬೆಂಗಳೂರು ಗ್ರಾಮಾಂತರ ಜಿಲ್ಲೆ

ಬೆಂಗಳೂರು ಗ್ರಾಮಾಂತರ ಜಿಲ್ಲೆಯು ಬೆಂಗಳೂರು ನಗರಕ್ಕೆ ತೀರಾ ಸಮೀಪವಾದುದು. ನಗರದ ಹವಾಮಾನವೇ ಈ ಜಿಲ್ಲೆಯಲ್ಲೂ ಕಂಡು ಬರುತ್ತಿದೆ. ಈ ಜಿಲ್ಲೆಯಲ್ಲಿ ಎಂಟು ತಾಲ್ಲೂಕುಗಳಿವೆ. ಅವುಗಳೆಂದರೆ

(೧)ಹೊಸಕೋಟೆ (೨)ದೇವನಹಳ್ಳಿ (೩)ದೊಡ್ಡಬಳ್ಳಾಪುರ (೪)ನೆಲಮಂಗಲ (೫) ಮಾಗಡಿ (೬)ಕನಕಪುರ (೭) ಚನ್ನಪಟ್ಟಣ (೮) ರಾಮನಗರ

ಈ ಜಿಲ್ಲೆಯಲ್ಲಿ ಬಯಲು ಪ್ರದೇಶ ಹೆಚ್ಚು. ಅನೇಕ ಬೆಟ್ಟಗುಡ್ಡಗಳೂ ಇವೆ. ಅರ್ಕಾವತಿ, ಜಿಲ್ಲೆಯ ಮುಖ್ಯನದಿ. ಕುಮುದ್ವತಿ ಮತ್ತು ದಕ್ಷಿಣ ಪಿನಾಕಿನಿ ನದಿಗಳೂ ಹರಿಯುತ್ತವೆ. ರಾಗಿ ಇಲ್ಲಿನ ಮುಖ್ಯ ಬೆಳೆ. ಹೂ, ತರಕಾರಿ ಮತ್ತು ದ್ವಿದಳ ಧಾನ್ಯಗಳನ್ನು ಬೆಳೆಯುತ್ತಾರೆ. ಇತ್ತೀಚೆಗೆ ರೇಷ್ಮೆ ಕೃಷಿ ಪ್ರಗತಿಯಲ್ಲಿದೆ.

ದೊಡ್ಡಬಳ್ಳಾಪುರ ತಾಲ್ಲೂಕು ಕೈಗಾರಿಕೆಗಳಿಗೆ ಹೆಸರಾಗಿದೆ. ಇಲ್ಲಿ ಬಟ್ಟೆಗಿರಣಿಗಳು ಮತ್ತು ಕೈಮಗ್ಗಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ವಿಜಯಪುರ, ರಾಮನಗರ ಮತ್ತು ಕನಕಪುರಗಳಲ್ಲಿ ರೇಷ್ಮೆಗೂಡಿನ ಮಾರುಕಟ್ಟೆಗಳಿವೆ.

೩. ಕೋಲಾರ ಜಿಲ್ಲೆ

ಕರ್ನಾಟಕದ ಪೂರ್ವದ ಅಂಚಿಗೆ ಸೇರಿರುವ ಕೋಲಾರ ಜಿಲ್ಲೆಯಲ್ಲಿ ಹನ್ನೊಂದು ತಾಲ್ಲೂಕುಗಳಿವೆ.

೧.ಕೋಲಾರ ೨.ಚಿಕ್ಕಬಳ್ಳಾಪುರ ೩.ಶಿಡ್ಲಘಟ್ಟ ೪.ಚಿಂತಾಮಣಿ ೫. ಮಾಲೂರು ೬.ಮುಳಬಾಗಿಲು ೭.ಗೌರೀಬಿದನೂರು ೮.ಗುಡಿಬಂಡೆ ೯.ಬಂಗಾರಪೇಟೆ ೧೦.ಶ್ರೀನಿವಾಸಪುರ ೧೧.ಬಾಗೇಪಲ್ಲಿ

ರಾಜ್ಯದ ಮೈದಾನ ಪ್ರದೇಶಗಳಲ್ಲಿ ಕೋಲಾರ ಜಿಲ್ಲೆಯೂ ಒಂದು. ಈ ಜಿಲ್ಲೆಯಲ್ಲಿ ಮಳೆ ಅತ್ಯಲ್ಪ ಹಾಗೂ ಅಕಾಲಿಕ. ಜಿಲ್ಲೆಯ ವಾಯುಗುಣ ಹಿತಕರವಾಗಿದೆ. ಈ ಜಿಲ್ಲೆಯಲ್ಲಿ ಪಾಲಾರ್, ಪೆನ್ನಾರ್, ಉತ್ತರ ಪಿನಾಕಿನಿ, ದಕ್ಷಿಣ ಪಿನಾಕಿನಿ ಮತ್ತು ಪಾಪಾಘ್ನಿ ನದಿಗಳು ಹರಿಯುತ್ತಿವೆಯಾದರೂ ಬೇಸಗೆಯಲ್ಲಿ ಬತ್ತಿಹೋಗುತ್ತವೆ. ಇಲ್ಲಿನ ರೈತರು ಕೆರೆ, ಬಾವಿ ಮತ್ತು ಪಂಪ್‌ಸೆಟ್‌ಗಳ ಮೂಲಕ ವ್ಯವಸಾಯಕ್ಕೆ ನೀರನ್ನು ಪೂರೈಸಿಕೊಳ್ಳುತ್ತಾರೆ. ರಾಗಿ, ಕಬ್ಬು, ಮುಸುಕಿನ ಜೋಳ, ನೆಲಗಡಲೆ, ಮೆಣಸಿನಕಾಯಿ, ರೇಷ್ಮೆ, ಹೂವು, ತರಕಾರಿಗಳು ಹಾಗೂ ದ್ವಿದಳಧಾನ್ಯಗಳು ಜಿಲ್ಲೆಯ ಮುಖ್ಯ ಬೆಳೆಗಳು.

ಕೋಲಾರ ಜಿಲ್ಲೆಯ ಕೆ.ಜಿ.ಎಫ್‌ನ ಬಳಿ ಚಿನ್ನದ ಗಣಿ ಇದೆ. ಇದು ಭಾರತದಲ್ಲೇ ಪ್ರಸಿದ್ಧದುದು. ಗೌರೀಬಿದನೂರಿನಲ್ಲಿ ಸಕ್ಕರೆ ಕಾರ್ಖಾನೆ ಮತ್ತು ಭೂಕಂಪ ಮಾಪನ ಕೇಂದ್ರವಿದೆ. ಅಲ್ಲದೆ ಜಿಲ್ಲೆಯ ಎಲ್ಲ ತಾಲ್ಲೂಕುಗಳೂ ಉತ್ತಮವಾದ ವ್ಯಾಪಾರ ಕೇಂದ್ರಗಳಾಗಿವೆ.

ಪ್ರೇಕ್ಷಣೀಯ ಸ್ಥಳಗಳು ಜಿಲ್ಲೆಯಾದ್ಯಂತ ಕಂಡುಬರುತ್ತವೆ. ಕೋಲಾರದ ಕೋಲಾರಮ್ಮನ ದೇವಾಲಯ, ಶತಶೃಂಗ ಪರ್ವತ ಮತ್ತು ಅಂತರಗಂಗೆ ಈ ಸ್ಥಳಗಳು ಅನೇಕ ಕತೆಗಳನ್ನು ಒಳಗೊಂಡಿವೆ. ಚಿಂತಾಮಣಿ ತಾಲ್ಲೂಕಿನ ಕೈವಾರದ ಬೆಟ್ಟ ಹಾಗೂ ಅಮರನಾರಾಯಣ ದೇವಾಲಯ ಮತ್ತು ಯೋಗಿ ವೀರನಾರಾಯಣ ಸ್ವಾಮಿಗಳ ಮಠ ಇವುಗಳು ನೋಡುವಂತಹ ಸ್ಥಳಗಳು. ಅಲ್ಲದೆ ಚಿಕ್ಕಬಳ್ಳಾಪುರ ತಾಲ್ಲೂಕಿನ ನಂದಿ ಗಿರಿಧಾಮವು ಪ್ರಕೃತಿ ಸೌಂದರ್ಯಕ್ಕೆ ಹೆಸರುವಾಸಿಯಾಗಿದೆ. ಗೌರಿಬಿದನೂರು ತಾಲ್ಲೂಕಿನ ವಿದುರಾಶ್ವತ್ಥವೂ ಒಂದು ಪುಣ್ಯಕ್ಷೇತ್ರ. ಎರಡನೇ ಜಲಿಯನ್‌ವಾಲಾ ಬಾಗ್ ಹತ್ಯಾಕಂಡ ನಡೆದದ್ದು ಇಲ್ಲಿಯೇ. ಮುಳುಬಾಗಿಲು ತಾಲ್ಲೂಕಿನ ಅವನಿ, ಕುರುಡುಮಲೆ ಮತ್ತು ಬಂಗಾರು ತಿರುಪತಿ ಈ ಸ್ಥಳಗಳೂ ಪುಣ್ಯಕ್ಷೇತ್ರಗಳಾಗಿವೆ.

೪. ತುಮಕೂರು ಜಿಲ್ಲೆ

ತೆಂಗಿನ ಬೀಡು ಎಂದು ಪ್ರಸಿದ್ಧವಾಗಿರುವ ತುಮಕೂರು ಜಿಲ್ಲೆ ಹತ್ತು ತಾಲ್ಲೂಕುಗಳನ್ನೊಳಗೊಂಡಿದೆ. ಅವುಗಳೆಂದರೆ,

೧. ತುಮಕೂರು ೨. ಕೊರಟಗೆರೆ ೩. ಮಧುಗಿರಿ ೪. ಪಾವಗಡ ೫. ಶಿರಾ ೬. ಕುಣಿಗಲ್ ೭. ಗುಬ್ಬಿ ೮. ತಿಪಟೂರು ೯. ಚಿಕ್ಕನಾಯಕನ ಹಳ್ಳಿ ೧೦. ತುರುವೇಕೆರೆ

ಬಹುಮಟ್ಟಿಗೆ ಈ ಜಿಲ್ಲೆಯಲ್ಲಿ ಬಯಲು ಪ್ರದೇಶ ಕಂಡುಬರುತ್ತದೆ. ಬೆಟ್ಟಪ್ರದೇಶಗಳ ಸುತ್ತ ಅರಣ್ಯಗಳು ಹಬ್ಬಿವೆ. ದೇವರಾಯನ ದುರ್ಗ, ಮಧುಗಿರಿ, ಚಿಕ್ಕನಾಯಕನಹಳ್ಳಿ, ಶಿರಾ, ಕೊರಟಗೆರೆ ಮುಂತಾದ ಕಡೆ ಅರಣ್ಯಗಳಿವೆ. ಈ ಜಿಲ್ಲೆಯಲ್ಲೂ ಮಳೆ ಕಡಿಮೆ. ಕೆರೆಗಳು ಮತ್ತು ಜಲಾಶಯಗಳ ನೀರನ್ನು ವ್ಯವಸಾಯಕ್ಕೆ ಬಳಸಿಕೊಳ್ಳುತ್ತಾರೆ. ಜಯಮಂಗಲಿ, ಶಿಂಷಾ, ಸುವರ್ಣಮುಖಿ, ಗರುಡಾಚಲ ಮತ್ತು ಉತ್ತರ ಪಿನಾಕಿನಿ ನದಿಗಳು ಈ ಜಿಲ್ಲೆಯಲ್ಲಿ ಹರಿಯುತ್ತವೆ. ಮಾರ್ಕೋನಹಳ್ಳಿ ಜಲಾಶಯ, ಬೋರನಕಣಿವೆ ಜಲಾಶಯ, ನಾಗಿಣಿ ಜಲಾಶಯ ಮತ್ತು ದೀಪಾಂಬುಧಿ ಕೆರೆಗಳ ನೀರು ವ್ಯವಸಾಯಕ್ಕೆ ಉಪಯುಕ್ತವಾಗಿದೆ.

ಭತ್ತ, ರಾಗಿ, ಜೋಳ, ಹುರುಳಿ, ನೆಲಗಡಲೆ, ತೆಂಗು, ಅಡಿಕೆ, ಬಾಳೆ ಮುಂತಾದುವು ಇಲ್ಲಿನ ಮುಖ್ಯ ಬೆಳೆಗಳು. ತಿಪಟೂರಿನ ತೆಂಗಿನಕಾಯಿ ಮತ್ತು ಮಧುಗಿರಿಯ ದಾಳಿಂಬೆ ಹಣ್ಣು ಪ್ರಸಿದ್ಧವಾಗಿದೆ. ಅಲ್ಲದೆ ಮಾವು, ಹಲಸು ಮತ್ತು ಸೀತಾಫಲ ಹಣ್ಣುಗಳನ್ನು ಜಿಲ್ಲೆಯಲ್ಲಿ ವಿಶೇಷವಾಗಿ ಬೆಳೆಯುತ್ತಾರೆ.

ತುಮಕೂರು ಜಿಲ್ಲೆ ಕೈಗಾರಿಕೆಗಳಲ್ಲೂ ಶ್ರೀಮಂತವಾಗಿದೆ. ಇಲ್ಲಿನ ಮುಖ್ಯ ಕಾರ್ಖಾನೆಗಳೆಂದರೆ ಎಚ್.ಎಂ.ಟಿ. ಕೈಗಡಿಯಾರ ಕಾರ್ಖಾನೆ, ಸೋಪಿನ ಕಾರ್ಖಾನೆ, ತಾಂತ್ರಿಕ ವಸ್ತುಗಳ ಕಾರ್ಖಾನೆ, ಅಮ್ಮಸಂದ್ರದ ಸಿಮೆಂಟ್ ಕಾರ್ಖಾನೆ ಇತ್ಯಾದಿ.

ದೇವರಾಯನ ದುರ್ಗ, ಎಡೆಯೂರು, ಸಿದ್ದಗಂಗಾ, ಶಿವಗಂಗಾ ಮುಂತಾದ ಸ್ಥಳಗಳು ಈ ಜಿಲ್ಲೆಯ ಪುಣ್ಯಕ್ಷೇತ್ರಗಳು. ಗೂಳೂರು ಗಣೇಶನ ಜಾತ್ರೆ, ಮಧುಗಿರಿ ಮಾರೆಮ್ಮನ ಜಾತ್ರೆಗಳು ಪ್ರಸಿದ್ಧವಾಗಿವೆ.

೫.ಚಿತ್ರದುರ್ಗ ಜಿಲ್ಲೆ

ಈ ಜಿಲ್ಲೆಯಲ್ಲಿ ಒಂಬತ್ತು ತಾಲ್ಲೂಕುಗಳಿವೆ. ಅವುಗಳೆಂದರೆ:

೧. ಚಿತ್ರದುರ್ಗ ೨. ಮೊಳಕಾಲ್ಮೂರು ೩. ಜಗಳೂರು ೪. ಹರಿಹರ ೫. ದಾವಣಗೆರೆ ೬. ಹಿರಿಯೂರು ೭. ಹೊಳಲ್ಕೆರೆ ೮. ಚಳ್ಳಕೆರೆ ೯. ಹೊಸದುರ್ಗ

ಚಿತ್ರದುರ್ಗ ಜಿಲ್ಲೆಯ ವಿಸ್ತೀರ್ಣ ಹತ್ತುಸಾವಿರದ ಎಂಟನೂರಾ ಐವತ್ತೈದು ಚದರ ಕಿಲೋ ಮೀಟರಗಳು. ಈ ಜಿಲ್ಲೆ ಹದಿನೇಳು ಲಕ್ಷ ಮೂವತ್ತೆಂಟು ಸಾವಿರ ಜನಸಂಖ್ಯೆಯನ್ನು ಹೊಂದಿದೆ. ಜಿಲ್ಲೆಯ ಬಹುಭಾಗ ಬೆಟ್ಟಗಳು ಮತ್ತು ಸಮತಟ್ಟಾದ ಕಣಿವೆಗಳಿಂದ ಕೂಡಿದೆ. ಇಲ್ಲಿ ಮಳೆ ಕಡಿಮೆ. ಬೇಸಿಗೆಯಲ್ಲಿ ಹೆಚ್ಚು ಸೆಖೆಯಾಗುತ್ತದೆ ಮತ್ತು ಚಳಿಗಾಲ ಹಿತಕರವಾಗಿರುತ್ತದೆ. ರಾಗಿ, ಜೋಳ, ಭತ್ತ, ಕಬ್ಬು, ಹತ್ತಿ, ನೆಲಗಡಲೆ, ಮೆಣಸಿನಕಾಯಿ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ.

ವೇದಾವತಿ ಈ ಜಿಲ್ಲೆಯ ಮುಖ್ಯ ನದಿ. ವಾಣಿವಿಲಾಸ ಸಾಗರ ಜಲಾಶಯ, ಭದ್ರಾ ಜಲಾಶಯ ಮತ್ತು ಸುವರ್ಣಮುಖಿ ನದಿಯ ನೀರನ್ನು ವ್ಯವಸಾಯಕ್ಕೆ ಬಳಸಿಕೊಳ್ಳುತ್ತಾರೆ.

ಚಿತ್ರದುರ್ಗ ಜಿಲ್ಲೆಯ ಮುಖ್ಯ ಕೈಗಾರಿಕೆಗಳೆಂದರೆ ಹಿರಿಯೂರಿನ ಸಕ್ಕರೆ ಕಾರ್ಖಾನೆ, ಯಂತ್ರಪುರದ ಕಿರ್ಲೋಸ್ಕರ ಕಾರ್ಖಾನೆಗಳು. ಚಿತ್ರದುರ್ಗ ತಾಲ್ಲೂಕಿನ ಇಂಗಳದಾಳು ಎಂಬಲ್ಲಿ ತಾಮ್ರದ ಅದುರು ದೊರೆಯುತ್ತದೆ. ಅಲ್ಲದೆ ಜಿಲ್ಲೆಯ ವಿವಿಧ ಕಡೆಗಳಲ್ಲಿ, ಕಬ್ಬಿಣ, ಮ್ಯಾಂಗನೀಸ್, ಬಾಕ್ಸೈಟ್, ಕಲ್ನಾರು ಮತ್ತು ಸುಣ್ಣದ

ಕಲ್ಲು ದೊರೆಯುತ್ತವೆ. ಮೊಳಕಾಲ್ಮೂರು ತಾಲ್ಲೂಕು ಕೈಮಗ್ಗದ ರೇಷ್ಮೆ ಬಟ್ಟೆಗಳಿಗೆ ಪ್ರಸಿದ್ಧವಾಗಿದೆ. ಈ ಜಿಲ್ಲೆಯಲ್ಲಿ ಎಣ್ಣೆ ಗಿರಣಿಗಳು ಬಹಳ ಸಂಖ್ಯೆಯಲ್ಲಿವೆ.

ಚಿತ್ರದುರ್ಗವು ಪಾಳೆಯಗಾರರ ಆಳ್ವಿಕೆಗೆ ಹೆಸರಾಗಿತ್ತು. ಇಲ್ಲಿನ ಕೋಟೆಯೂ ಪಾಳೇಗಾರರ ಕಾಲದ್ದು. ಮದಕರಿನಾಯಕನ ವಂಶದ ಈ ನಾಯಕರ ಸಾಹಸ ಆಳ್ವಿಕೆಗಳು ಚರಿತ್ರೆಯಲ್ಲಿ ಮುಖ್ಯವಾಗಿವೆ. ಕೋಟೆ ರಕ್ಷಿಸಿದ ಒನಕೆ ಓಬವ್ವನ ಸಾಹಸವೂ ಇಲ್ಲಿ ಮುಖ್ಯವಾದುದು. ಚಿತ್ರದುರ್ಗದ ಬೆಟ್ಟದ ಹಿಡಿಂಬೇಶ್ವರ ದೇವಾಲಯ ಆಕರ್ಷಕವಾಗಿದೆ.

ಶಿವಮೊಗ್ಗ ಜಿಲ್ಲೆ

ಶಿವಮೊಗ್ಗ ಜಿಲ್ಲೆ ೯ ತಾಲ್ಲೂಕುಗಳನ್ನೊಳಗೊಂಡಿದೆ. ಅವುಗಳೆಂದರೆ: ೧. ಶಿವಮೊಗ್ಗ ೨. ಸೊರಬ ೩ ಸಾಗರ ೪. ಹೊಸನಗರ ೫. ತೀರ್ಥಹಳ್ಳಿ ೬. ಶಿಕಾರಿಪುರ ೭. ಹೊನ್ನಾಳಿ ೮. ಭದ್ರಾವತಿ ೯. ಚನ್ನಗಿರಿ

ಇಲ್ಲಿ ಮಲೆನಾಡು ಪ್ರದೇಶ ಅರೆಮಲೆನಾಡು ಪ್ರದೇಶ ಮತ್ತು ಬಯಲು ಪ್ರದೇಶಗಳನ್ನು ಕಾಣಬಹುದು. ಕಾಡು, ಕಣಿವೆ ಮತ್ತು ಕಡಿದಾದ ಘಟ್ಟಶ್ರೇಣಿ ಮತ್ತು ಜಲಪಾತಗಳಿಂದ ಈ ಜಿಲ್ಲೆ ರಮ್ಯವಾಗಿದೆ. ಕರ್ನಾಟಕದಲ್ಲೇ ಅತಿ ಹೆಚ್ಚು ಮಳೆಯಾಗುವ ಆಗುಂಬೆ, ಶಿವಮೊಗ್ಗ ಜಿಲ್ಲೆಗೆ ಸೇರಿದ್ದು ಎನ್ನುವುದನ್ನು ಮರೆಯುವಂತಿಲ್ಲ. ಆಗುಂಬೆಯ ಸೂರ್ಯೋದಯ, ಸೂರ್ಯಾಸ್ತಗಳ ನೋಟಕ್ಕಾಗಿ ಪ್ರವಾಸಿಗರು ಹಾತೊರೆಯುತ್ತಾರೆ.

ಭತ್ತ, ಅಡಿಕೆ, ತೆಂಗಿನಕಾಯಿ, ಗೇರುಬೀಜ, ಮೆಣಸು, ನೆಲಗಡಲೆ ಹೊಗೆಸೊಪ್ಪು ಇಲ್ಲಿನ ಮುಖ್ಯ ಬೆಳೆಗಳು. ಕೈಗಾರಿಕೆಗಳಲ್ಲೂ ಶಿವಮೊಗ್ಗ ಜಿಲ್ಲೆ

ಯಶಸ್ಸನ್ನು ಸಾಧಿಸಿದೆ. ಭದ್ರಾವತಿಯಲ್ಲಿ ಕಬ್ಬಿಣ ಹಾಗೂ ಉಕ್ಕಿನ ಕಾರ್ಖಾನೆಯಿದೆ. ಸಿಮೆಂಟ್ ಕಾರ್ಖಾನೆಯೂ ಇದೆ. ಶಿವಮೊಗ್ಗದಲ್ಲಿ ಗಂಧದ ಎಣ್ಣೆ ಕೈಗಾರಿಕೆ, ಸಾಬೂನು ಕಾರ್ಖಾನೆ ಮತ್ತು ಸಕ್ಕರೆ ಕಾರ್ಖಾನೆಗಳಿವೆ. ಕುಂಸಿಯಲ್ಲಿ ಮ್ಯಾಂಗನೀಸ್ ಗಣಿಗಳಿವೆ.

ತುಂಗ, ಭದ್ರಾ, ತುಂಗಭದ್ರಾ, ಶರಾವತಿ, ಕುಮುದ್ವತಿ ಮತ್ತು ವರದಾ ನದಿಗಳು ಜಿಲ್ಲೆಯಲ್ಲಿ ಹರಿಯುತ್ತವೆ. ಶರಾವತಿಯ ಜೋಗಜಲಪಾತ ಮತ್ತು ಭದ್ರಾಜಲಾಶಯ ಮತ್ತು ಲಿಂಗನಮಕ್ಕಿ ಜಲಾಶಯಗಳು ವಿದ್ಯುತ್ ಉತ್ಪಾದನೆಗೆ ಮತ್ತು ಪ್ರಕೃತಿ ರಮ್ಯತೆಗೆ ಹೆಸರಾಗಿವೆ.

ಸೊರಬ ತಾಲ್ಲೂಕಿನ ಚಂದ್ರಗುತ್ತಿಯ ರೇಣುಕಾಂಬ ಜಾತ್ರೆ ಬಹಳ ಪ್ರಸಿದ್ಧವಾದುದು.

೭. ಮೈಸೂರು ಜಿಲ್ಲೆ

ಮೈಸೂರು ಜಿಲ್ಲೆ ಕರ್ನಾಟಕ ರಾಜ್ಯದ ಒಂದು ವಿಭಾಗವೂ ಹೌದು. ಈ ಜಿಲ್ಲೆಯಲ್ಲಿ ಹನ್ನೊಂದು ತಾಲ್ಲೂಕುಗಳಿವೆ. ಅವುಗಳೆಂದರೆ:

೧. ಪಿರಿಯಾಪಟ್ಟಣ ೨. ಹುಣಸೂರು ೩. ಮೈಸೂರು ೪. ಟಿ. ನರಸೀಪುರ ೫. ಕೊಳ್ಳೇಗಾಲ ೬. ಯಳಂದೂರು ೭. ಚಾಮರಾಜನಗರ ೮. ನಂಜನಗೂಡು ೯. ಗುಂಡ್ಲುಪೇಟೆ ೧೦. ಹೆಗ್ಗಡದೇವನಕೋಟೆ ೧೧. ಕೃಷ್ಣರಾಜನಗರ

ಬಯಲು ಪ್ರದೇಶ ಮತ್ತು ಬೆಟ್ಟಶ್ರೇಣಿಗಳಿಂದ ಕೂಡಿದ ಮೈಸೂರು ಜಿಲ್ಲೆಯಲ್ಲಿ ಅರಣ್ಯಗಳೂ ಅಲ್ಲಲ್ಲಿ ಕಂಡುಬರುತ್ತವೆ. ಬಂಡೀಪುರ ಮತ್ತು ಬೇರಂಬಾಡಿಯ ಅರಣ್ಯಗಳು ಮುಖ್ಯವಾದುವು. ಈ ಜಿಲ್ಲೆಯ ಬಿಳಿಗಿರಿರಂಗನ

ಬೆಟ್ಟ, ಮಹದೇಶ್ವರ ಬೆಟ್ಟಗಳು ನಿಸರ್ಗದ ಸೊಬಗಿಗೆ ಹೆಸರಾಗಿವೆ. ಕಾವೇರಿ, ಕಬಿನಿ ಮತ್ತು ಲಕ್ಷ್ಮಣತೀರ್ಥ ನದಿಗಳು ಇಲ್ಲಿನ ಮುಖ್ಯ ನದಿಗಳು. ಕಾವೇರಿ ನದಿಯ ಕೃಷ್ಣರಾಜ ಜಲಾಶಯದಿಂದ ಜಿಲ್ಲೆಗೆ ನೀರಾವರಿ ಸೌಲಭ್ಯ ಲಭಿಸಿದೆ. ಈ ಜಿಲ್ಲೆಯ ಅರಣ್ಯಗಳಲ್ಲಿ ಬೆಲೆಬಾಳುವ ಗಂಧದ ಮರಗಳು ಮತ್ತು ಆನೆಗಳು ಕಂಡುಬರುತ್ತವೆ.

ರಾಗಿ, ಬತ್ತ, ಜೋಳ, ಹತ್ತಿ, ಹೊಗೆಸೊಪ್ಪು, ಕಬ್ಬು, ರೇಷ್ಮೆ, ದ್ವಿದಳ ಧಾನ್ಯಗಳು ಇತ್ಯಾದಿ ಇಲ್ಲಿನ ಬೆಳೆಗಳು. ಮೈಸೂರು, ಮಲ್ಲಿಗೆ ಹೂವಿಗೆ ಮತ್ತು ನಂಜನಗೂಡು, ರಸಬಾಳೆ ಬೆಳೆಗೆ ಪ್ರಸಿದ್ಧವಾಗಿದೆ. ಕೈಗಾರಿಕಾ ಕ್ಷೇತ್ರದಲ್ಲೂ ಜಿಲ್ಲೆ ಮುಂದುವರಿದಿದೆ. ಗಂಧದ ಎಣ್ಣೆಯ ಕಾರ್ಖಾನೆ, ಅರಗು ಮತ್ತು ಬಣ್ಣದ ಕಾರ್ಖಾನೆ, ರೇಷ್ಮೆ ಬಟ್ಟೆ ಮತ್ತು ನೂಲಿನ ತಯಾರಿಕೆ ಇವು ಮೈಸೂರಿನ ಮುಖ್ಯ ಕೈಗಾರಿಕೆಗಳು. ಅಲ್ಲದೆ ಹಲವಾರು ಖಾಸಗಿ ಕೈಗಾರಿಕೆಗಳೂ ಇವೆ.

ಇಲ್ಲಿ ಪ್ರತಿ ವರ್ಷ, ದಸರಾ ಉತ್ಸವ ನಡೆಯುತ್ತದೆ. ಮೈಸೂರಿನ ಅರಮನೆ, ಜಗನ್ಮೋಹನ ಬಂಗಲೆ, ಲಲಿತಮಹಲ್ ಇತ್ಯಾದಿ ಕಟ್ಟಡಗಳು, ಪ್ರಾಣಿ ಸಂಗ್ರಹಾಲಯ, ಕರ್ಜನ್‌ಪಾರ್ಕ್ ಮತ್ತು ಇತರೆ ಉದ್ಯಾನವನಗಳೂ ಪ್ರವಾಸಿಗರನ್ನು ಆಕರ್ಷಿಸುತ್ತವೆ. ಕೃಷ್ಣರಾಜಸಾಗರ ಜಲಾಶಯ, ಬೃಂದಾವನ, ಚಾಮುಂಡಿ ಬೆಟ್ಟ ಇತ್ಯಾದಿ, ಸ್ಥಳಗಳೂ ಮೈಸೂರಿನ ಪ್ರೇಕ್ಷಣೀಯ ಸ್ಥಳಗಳೆನಿಸಿವೆ. ನಂಜನಗೂಡು ಒಂದು ಹೆಸರಾದ ಪುಣ್ಯಕ್ಷೇತ್ರ. ಇಲ್ಲಿ ಶ್ರೀಕಂಠೇಶ್ವರ ಸ್ವಾಮಿ ದೇವಾಲಯವಿದೆ.

೮. ಮಂಡ್ಯ ಜಿಲ್ಲೆ

ಮಂಡ್ಯ ಜಿಲ್ಲೆ ಮೈಸೂರು ವಿಭಾಗಕ್ಕೆ ಸೇರಿದೆ. ಹಾಗೂ ಕರ್ನಾಟಕದ ದಕ್ಷಿಣ ಭಾಗದಲ್ಲಿದೆ. ಈ ಜಿಲ್ಲೆಯಲ್ಲಿ ಏಳು ತಾಲ್ಲೂಕುಗಳಿವೆ. ಅವುಗಳೆಂದರೆ,

೧. ಮಂಡ್ಯ ೨. ಮದ್ದೂರು ೩. ಮಳವಳ್ಳಿ ೪. ನಾಗಮಂಗಲ ೫. ಕೃಷ್ಣರಾಜಪೇಟೆ ೬. ಶ್ರೀರಂಗಪಟ್ಟಣ ೭. ಪಾಂಡವಪುರ

ಇದು ಬಯಲು ಪ್ರದೇಶವಾಗಿದ್ದು ಅಲ್ಲಲ್ಲಿ ಬೆಟ್ಟಗಳು ಕಂಡುಬರುತ್ತವೆ. ಆದಿಚುಂಚನಗಿರಿ ಬೆಟ್ಟ, ಕಬ್ಬಾಳದುರ್ಗ, ಕರಿಘಟ್ಟ ಮತ್ತು ನಾರಾಯಣದುರ್ಗಗಳು ಮುಖ್ಯವಾದುವು. ಕಾವೇರಿ ಲೋಕಪಾವನಿ, ವೀರವೈಷ್ಣವಿ, ಹೇಮಾವತಿ ಹಾಗೂ ಶಿಂಷಾ ನದಿಗಳು ಈ ಜಿಲ್ಲೆಯಲ್ಲಿ ಹರಿಯುತ್ತವೆ. ಇಲ್ಲಿನ ಶಿವನಸಮುದ್ರ ವಿದ್ಯುತ್ ಉತ್ಪಾದನೆಗೆ ಪ್ರಸಿದ್ಧವಾಗಿದೆ. ಗಗನಚುಕ್ಕಿ ಮತ್ತು ಭರಚುಕ್ಕಿ ಜಲಪಾತಗಳೂ ಈ ಜಿಲ್ಲೆಗೆ ಸೇರಿವೆ.

ಬತ್ತ ಮತ್ತು ಕಬ್ಬು ಇಲ್ಲಿನ ಮುಖ್ಯ ಬೆಳೆಗಳು. ರಾಗಿ, ಜೋಳ, ತೆಂಗು, ಕಡಲೆಕಾಯಿ, ದ್ವಿದಳಧಾನ್ಯಗಳು ಇತ್ಯಾದಿ ಬೆಳೆಗಳೂ ಕಂಡುಬರುತ್ತವೆ.

ಅಕ್ಕಿಗಿರಣಿಗಳು ಮತ್ತು ಸಕ್ಕರೆ ಕಾರ್ಖಾನೆಗಳು ವಿಶೇಷವಾಗಿ ಕಂಡುಬರುವುದು ಮಂಡ್ಯ ಜಿಲ್ಲೆಯಲ್ಲಿ. ಮಂಡ್ಯದ ಬಳಿ ದೊಡ್ಡ ಸಕ್ಕರೆ ಕಾರ್ಖಾನೆಯಿದೆ. ಮಂಡ್ಯ ಹತ್ತಿಬಟ್ಟೆ, ಹಿತ್ತಾಳೆ ಪಾತ್ರೆ ಮತ್ತು ಕಂಬಳಿ ತಯಾರಿಕೆಗೂ ಹೆಸರುವಾಸಿಯಾಗಿದೆ.

ಪುರಾಣ ಮತ್ತು ಇತಿಹಾಸಗಳೂ ಮಂಡ್ಯಜಿಲ್ಲೆಗೆ ಸಂಬಂಧಿಸಿದಂತೆ ಹೇರಳವಾಗಿವೆ. ಇಲ್ಲಿ ಪಾಂಡವರು ವಾಸವಾಗಿದ್ದರಂತೆ. ಅರ್ಜುನಪುರ, ಕುಂತೀಹಳ್ಳಿ, ಕದಂಬಕ್ಷೇತ್ರ ಮತ್ತು ಗೌತಮಕ್ಷೇತ್ರ ಇತ್ಯಾದಿ ಊರುಗಳ ಬಗ್ಗೆ ಅನೇಕ ಮಹಾಭಾರತದ ಕತೆಗಳಿವೆ. ಜಿಲ್ಲೆಯ, ಶ್ರೀರಂಗಪಟ್ಟಣ ಹೈದರ್‌ಅಲಿ ಮತ್ತು ಟಿಪ್ಪೂಸುಲ್ತಾನರ ರಾಜಧಾನಿಯಾಗಿತ್ತು. ಈಗ ಕೋಟೆಯೊಂದು ಉಳಿದಿದೆ. ರಂಗನಾಥಸ್ವಾಮಿ ದೇವಾಲಯವೂ ಇದೆ. ಮೇಲುಕೋಟೆಯಲ್ಲಿ ಚೆಲುವನಾರಾಯಣ ದೇವಾಲಯ ಇದೆ. ಇವುಗಳೆಲ್ಲ ಮಂಡ್ಯಜಿಲ್ಲೆಯ ಪ್ರೇಕ್ಷಣೀಯ ಸ್ಥಳಗಳು.

೯. ಹಾಸನ ಜಿಲ್ಲೆ

ಹಾಸನ ಜಿಲ್ಲೆ ಮೈಸೂರು ವಿಭಾಗಕ್ಕೆ ಸೇರಿದೆ. ಈ ಜಿಲ್ಲೆಯಲ್ಲಿ ಎಂಟು ತಾಲ್ಲೂಕುಗಳಿವೆ. ಅವುಗಳೆಂದರೆ:

೧. ಅರಸೀಕೆರೆ ೨. ಚನ್ನರಾಯಪಟ್ಟಣ ೩. ಹಾಸನ ೪. ಹೊಳೆನರಸೀಪುರ ೫. ಅರಕಲಗೂಡು ೬. ಬೇಲೂರು ೭. ಸಕಲೇಶಪುರ ೮. ಆಲೂರು

ಈ ಜಿಲ್ಲೆಯ ಭೂ ಪ್ರದೇಶವನ್ನು ಮಲೆನಾಡು, ಉಪಮಲೆನಾಡು ಮತ್ತು ಮೈದಾನ ಪ್ರದೇಶವೆಂದು ಮೂರು ವಿಭಾಗ ಮಾಡಬಹುದು. ಸಮೃದ್ಧ ಮರಗಳಿದ್ದು ಇಲ್ಲಿ ಸಾಕಷ್ಟು ಮಳೆಯೂ ಬೀಳುತ್ತದೆ. ಜಿಲ್ಲೆಯ ಪಶ್ಚಿಮ ಘಟ್ಟಗಳ ಪ್ರದೇಶದಲ್ಲಿ ಹೆಚ್ಚು ಮಳೆಯಾಗುತ್ತದೆ. ಹೇಮಾವತಿ, ಕಾವೇರಿ ಮತ್ತು ಯಹಚಿ ನದಿಗಳು ಹರಿಯುತ್ತವೆ.

ಕಾಫಿ, ಮೆಣಸು, ಏಲಕ್ಕಿ, ತೆಂಗು, ಅಡಿಕೆ, ಆಲೂಗಡ್ಡೆ, ಹೂ, ಹಣ್ಣು ಮತ್ತು ತರಕಾರಿಗಳು ಇಲ್ಲಿನ ಮುಖ್ಯ ಬೆಳೆಗಳು. ದೊಡ್ಡ ಪ್ರಮಾಣದ ಕೈಗಾರಿಕೆಗಳು ಈ ಜಿಲ್ಲೆಯಲ್ಲಿ ಕಂಡುಬರುವುದಿಲ್ಲ. ಕ್ರೋಮೈಟ್, ಅಭ್ರಕ ಮತ್ತು ಕಲ್ನಾರಿನ ಗಣಿಗಳು ಅಲ್ಲಲ್ಲಿ ಕಂಡುಬರುತ್ತವೆ.

ವಾಸ್ತುಶಿಲ್ಪಕ್ಕೆ ಹಾಸನ ಜಿಲ್ಲೆ ಪ್ರಸಿದ್ಧವಾಗಿದೆ. ಬೇಲೂರು ಮತ್ತು ಹಳೇಬೀಡಿನ ದೇವಾಲಯಗಳು, ಹೊಯ್ಸಳರ ಕಾಲದ ಶಿಲ್ಪಕಲೆಯನ್ನು ಒಳಗೊಂಡಂಥವುಗಳಾಗಿವೆ. ಶ್ರವಣಬೆಳಗೊಳದ ಗೊಮ್ಮಟೇಶ್ವರ ವಿಗ್ರಹವೂ ಮುಖ್ಯವಾದುದು.

೧೦. ಕೊಡಗು ಜಿಲ್ಲೆ

ಕರ್ನಾಟಕದ ಜಿಲ್ಲೆಗಳಲ್ಲಿ ಅತಿ ಚಿಕ್ಕ ಜಿಲ್ಲೆ ಕೊಡಗು. ಇದು ಕರ್ನಾಟಕದ ನೈರುತ್ಯ ಭಾಗದಲ್ಲಿದೆ. ಹಾಗೂ ಮೈಸೂರು ವಿಭಾಗಕ್ಕೆ ಒಳಪಟ್ಟಿದೆ. ಈ ಜಿಲ್ಲೆಯಲ್ಲಿ ಮೂರು ತಾಲ್ಲೂಕುಗಳಿವೆ. ಅವುಗಳೆಂದರೆ:

೧. ಮಡಿಕೇರಿ ೨.ಸೋಮವಾರ ಪೇಟೆ ೩. ವಿರಾಜಪೇಟೆ

ಮಡಿಕೇರಿ ಜಿಲ್ಲಾ ಕೇಂದ್ರವಾಗಿದ್ದು ಜಿಲ್ಲೆಯ ಆಡಳಿತ ವ್ಯವಹಾರ ಇಲ್ಲಿ ನಡೆಯುತ್ತದೆ. ಗುಡ್ಡ ಪ್ರದೇಶಗಳು ಮತ್ತು ಕಣಿವೆಗಳು, ಸದಾ ಹಸುರಾಗಿರುವ ಕಾಡುಗಳು ಈ ಜಿಲ್ಲೆಯಲ್ಲಿ ವಿಶೇಷವಾಗಿ ಕಂಡುಬರುತ್ತವೆ. ಪಶ್ಚಿಮ ಘಟ್ಟಗಳು ಇಲ್ಲಿ ಕಂಡುಬರುತ್ತವೆ. ಕಾವೇರಿ ಕೊಡಗಿನ ಮುಖ್ಯ ನದಿ. ಈ ನದಿ ಹುಟ್ಟುವುದು ಕೊಡಗಿನ ಬ್ರಹ್ಮಗಿರಿ ಬೆಟ್ಟದಲ್ಲಿ. ನದಿಯ ಉಗಮ ಸ್ಥಳವನ್ನು ತಲಕಾವೇರಿ ಎಂದು ಕರೆಯುತ್ತಾರೆ. ಲಕ್ಷ್ಮಣತೀರ್ಥ, ಹೇಮಾವತಿ ಮೊದಲಾದ ನದಿಗಳು ಹರಿಯುತ್ತವೆ.

ಕಿತ್ತಳೆ ಮತ್ತು ಕಾಫಿ ಬೆಳೆಗೆ ಕೊಡಗು ಜಿಲ್ಲೆ ಹೆಸರುವಾಸಿಯಾಗಿದೆ. ಮೆಣಸು, ಏಲಕ್ಕಿ, ಭತ್ತ, ಚಹ ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಾರೆ. ಜೇನು ಸಾಕಾಣಿಕೆಯೂ ಹೆಚ್ಚಿನ ಪ್ರಮಾಣದಲ್ಲಿದೆ. ಕಾಫಿ ಪರಿಷ್ಕರಣ ಕಾರ್ಖಾನೆಗಳು ಭತ್ತದ ಗಿರಣಿಗಳೂ ಬಹಳವಾಗಿವೆ. ಮಡಿಕೇರಿಯಲ್ಲಿ ಪ್ಲಾಸ್ಟಿಕ್ ಚೀಲಗಳ ಕಾರ್ಖಾನೆ ಹಾಗೂ ಸ್ಟೀಲ್ ಪಾತ್ರೆ ತಯಾರಿಸುವ ಕಾರ್ಖಾನೆ ಇದೆ. ಸೋಮವಾರಪೇಟೆ ಮತ್ತು ಕೂಡಿಗೆಗಳಲ್ಲಿ ಕಾಫಿ ಬೆಳೆಗೆ ಅವಶ್ಯವಾದ ಉಪಕರಣಗಳನ್ನು ತಯಾರಿಸುವ ಕಾರ್ಖಾನೆಗಳಿವೆ. ಇತರೆ ದೊಡ್ಡ ಪ್ರಮಾಣದ ಕೈಗಾರಿಕೆಗಳಿಲ್ಲ.

ಮಡಿಕೇರಿ, ತಲಕಾವೇರಿ, ಕೂಡಿಗೆ, ಬೆಟ್ಟಳ್ಳಿ, ನಾಗರಹೊಳೆಯ ಅರಣ್ಯ ಮುಂತಾದ ಸ್ಥಳಗಳು ಪ್ರವಾಸಿಗರ ಆಕರ್ಷಕ ಕೇಂದ್ರಗಳಾಗಿವೆ. ಕಾವೇರಿ ಕೊಡಗಿನ ಜನರ ಕುಲದೇವತೆ. ಹುತ್ತರಿಯ ಹಬ್ಬ ಇಲ್ಲಿನ ವಿಶಿಷ್ಟ ಆಚರಣೆ. ಇತರೆ ಜಾತಿಯ ಜನರೇ ಅಲ್ಲದೆ ಕೊಡವ ಎಂಬ ಜನಾಂಗದವರೂ ಇಲ್ಲಿದ್ದಾರೆ. ಇವರ ಭಾಷೆಯೂ ಕೊಡವ ಭಾಷೆ. ಹಬ್ಬ ಆಚರಣೆಗಳ ಸಂದರ್ಭದಲ್ಲಿ ಕೆಲವು ನೃತ್ಯಗಳನ್ನು ಮಾಡುತ್ತಾರೆ. ಕೊಡವರ ಉಡಿಗೆ-ತೊಡಿಗೆಗಳು ಸಹ ಆಕರ್ಷಕವಾಗಿರುತ್ತವೆ.

೧೧. ದಕ್ಷಿಣ ಕನ್ನಡ

ದಕ್ಷಿಣ ಕನ್ನಡ ಜಿಲ್ಲೆ ಕರ್ನಾಟಕದ ಪಶ್ಚಿಮ ಕರಾವಳಿಯಲ್ಲಿದೆ. ಈ ಜಿಲ್ಲೆಯಲ್ಲಿ ಎಂಟು ತಾಲ್ಲೂಕುಗಳಿವೆ. ಅವುಗಳೆಂದರೆ:

೧. ಮಂಗಳೂರು ೨. ಕುಂದಾಪುರ ೩. ಕಾರ್ಕಳ ೪. ಬೆಳ್ತಂಗಡಿ ೫. ಉಡುಪಿ ೬. ಬಂಟ್ವಾಳ ೭. ಪುತ್ತೂರು ೮. ಸುಳ್ಯ

ಮಂಗಳೂರು ಜಿಲ್ಲಾ ಕೇಂದ್ರವಾಗಿದ್ದು ಜಿಲ್ಲೆಯ ಆಡಳಿತ ಇಲ್ಲಿ ನಡೆಯುತ್ತದೆ. ಇಲ್ಲಿ ಪಶ್ಚಿಮ ಘಟ್ಟಗಳಿವೆ. ಅರಬ್ಬೀ ಸಮುದ್ರವಿದೆ. ಕಣಿವೆಗಳು ಹಾಗೂ ನದಿಗಳಿವೆ. ಮಳೆಯೂ ಹೆಚ್ಚು, ಸೆಖೆಯೂ ಬಹಳ. ನೇತ್ರಾವತಿ, ಗುರುಪುರ, ಗಂಗೊಳ್ಳಿ, ಸೀತಾನದಿ, ಸ್ವರ್ಣನದಿ, ಕುಮಾರಧಾರ ಮುಂತಾದ ನದಿಗಳು ಹರಿಯುತ್ತವೆ. ಜಿಲ್ಲೆಯ ಹಲವು ನದಿಗಳಿಗೆ ಬಂದರುಗಳಿದ್ದು ಹಡಗು ಮತ್ತು ದೋಣಿಸಂಚಾರಕ್ಕೆ ಅವಕಾಶವಿದೆ. ಮಂಗಳೂರಿನಲ್ಲಿ ದೊಡ್ಡ ಬಂದರು ಇದೆ. ಮೀನುಗಾರಿಕೆಯೂ ಹೆಚ್ಚಿನ ಪ್ರಮಾಣದಲ್ಲಿದೆ.

ಭತ್ತ, ಕಬ್ಬು, ಅಡಿಕೆ, ಏಲಕ್ಕಿ, ಮೆಣಸಿನಕಾಯಿ, ಮೆಣಸು ಇತ್ಯಾದಿ ಬೆಳೆಗಳು ಈ ಜಿಲ್ಲೆಯಲ್ಲಿವೆ. ರಬ್ಬರ್ ತೋಟಗಳೂ ಹೆಚ್ಚಾಗಿವೆ. ಬ್ಯಾಂಕಿಂಗ್ ಮತ್ತು ಉದ್ಯಮದಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಪ್ರಸಿದ್ಧವಾಗಿದೆ. ಕೆನರಾ ಬ್ಯಾಂಕ್, ಸಿಂಡೀಕೇಟ್ ಬ್ಯಾಂಕ್ ಮತ್ತು ಉಡುಪಿ ಹೋಟೆಲ್‌ಗಳ ಮೂಲ ದಕ್ಷಿಣ ಕನ್ನಡ ಜಿಲ್ಲೆಯದು.

ಅನೇಕ ಯಾತ್ರಾಸ್ಥಳಗಳು ದಕ್ಷಿಣ ಕನ್ನಡದಲ್ಲಿವೆ. ಧರ್ಮಸ್ಥಳದ ಮಂಜುನಾಥ ದೇವಾಲಯ, ಉಡುಪಿಯ ಶ್ರೀಕೃಷ್ಣ ದೇವಾಲಯ, ಕುಕ್ಕೆ ಸುಬ್ರಹ್ಮಣ್ಯ ಕೊಲ್ಲೂರಿನ ಮೂಕಾಂಬಿಕಾ ದೇವಾಲಯ, ಕದ್ರಿ, ಕೊಡಚಾದ್ರಿ, ಮೂಡಬಿದರೆ, ವೇಣೂರು ಇತ್ಯಾದಿ ಅನೇಕ ಯಾತ್ರಾಸ್ಥಳಗಳು ಇವೆ.

೧೨. ಚಿಕ್ಕಮಗಳೂರು ಜಿಲ್ಲೆ

ಚಿಕ್ಕಮಗಳೂರು ಜಿಲ್ಲೆ ಮೈಸೂರು ವಿಭಾಗಕ್ಕೆ ಸೇರಿದೆ. ಈ ಜಿಲ್ಲೆಯಲ್ಲಿ ಏಳು ತಾಲ್ಲೂಕುಗಳಿವೆ.

೧. ಕಡೂರು ೨. ಚಿಕ್ಕಮಗಳೂರು ೩. ಕೊಪ್ಪ ೪. ಮೂಡಿಗೆರೆ ೫. ನರಸಿಂಹರಾಜಪುರ ೬. ತರೀಕೆರೆ ೭. ಶೃಂಗೇರಿ

ಮಲೆನಾಡು, ಬಯಲು ಪ್ರದೇಶ ಮತ್ತು ಬೆಟ್ಟ ಪ್ರದೇಶಗಳು, ಅರಣ್ಯಗಳು ಇಲ್ಲಿ ಹೆಚ್ಚಾಗಿವೆ. ಇಲ್ಲಿನ ಬಾಬಾಬುಡನ್‌ಗಿರಿ ಬೆಟ್ಟದ ಮುಳ್ಳಯ್ಯನಗಿರಿ ಶಿಖರ ಬಹಳ ಎತ್ತರವಾಗಿದೆ. ವರಾಹಾ, ತುಂಗಾ, ಭದ್ರಾ ಮತ್ತು ನೇತ್ರಾವತಿ ನದಿಗಳ ಉಗಮ ಈ ಜಿಲ್ಲೆಯಲ್ಲಿಯೇ.

ಭತ್ತ, ಏಲಕ್ಕಿ, ತೆಂಗು, ಅಡಿಕೆ, ಕಾಫಿ ಮತ್ತು ಕಿತ್ತಳೆ ಇಲ್ಲಿನ ಮುಖ್ಯ ಬೆಳೆಗಳು. ಜಿಲ್ಲೆಯ ಕುದುರೆಮುಖ ಮತ್ತು ಕೆಮ್ಮಣ್ಣುಗುಂಡಿಯಲ್ಲಿ ಕಬ್ಬಿಣದ ಅದುರಿನ ಗಣಿಗಳಿವೆ. ಕಾಫಿ ಬೆಳೆಗೆ ಸಹಾಯಕವಾಗುವ ಯಂತ್ರೋಪಕರಣಗಳ ಕಾರ್ಖಾನೆಗಳು ಹಾಗೂ ಕಾಫಿ ಹದ ಮಾಡುವ ಕಾರ್ಖಾನೆಗಳು ಜಿಲ್ಲೆಯಲ್ಲೆಲ್ಲಾ ಕಂಡು ಬರುತ್ತವೆ. ಅಕ್ಕಿಗಿರಣಿಗಳು ನೂಲು ಮತ್ತು ಕಂಬಳಿ ಮಗ್ಗಗಳು, ಮರಕೊಯ್ಯುವ ಕಾರ್ಖಾನೆಗಳನ್ನೂ ಗುರುತಿಸಬಹುದು. ಅಲ್ಲದೆ ಜೇನು ಸಾಕಾಣಿಕೆಯೂ ಇಲ್ಲಿನ ಮುಖ್ಯ ಉದ್ಯಮ.

ಇಲ್ಲಿ ಪ್ರೇಕ್ಷಣೀಯ ಸ್ಥಳಗಳು ಬಹಳ ಇವೆ. ಬಾಬಾಬುಡನ್‌ಗಿರಿ ಹಿಂದೂ ಮುಸ್ಲಿಂ ಎರಡೂ ಧರ್ಮಗಳವರ ಯಾತ್ರಾಸ್ಥಳ. ಶೃಂಗೇರಿಯಲ್ಲಿ ಶಂಕರಾಚಾರ್ಯರು ಸ್ಥಾಪಿಸಿದ ಶಾರದಾ ಪೀಠ ಇದೆ. ಇದೂ ಒಂದು ಪುಣ್ಯಕ್ಷೇತ್ರ. ತರೀಕೆರೆ ತಾಲ್ಲೂಕಿನ ಅಮೃತಾಪುರದ ಅಮೃತೇಶ್ವರ ದೇವಾಲಯ ಸುಂದರವಾಗಿದೆ. ಕುದುರೆಮುಖದ ಗಿರಿಧಾಮವೂ ಆಕರ್ಷಕವಾಗಿದೆ.

೧೩. ಬೆಳಗಾವಿ ಜಿಲ್ಲೆ

ಬೆಳಗಾವಿ ಜಿಲ್ಲೆ ರಾಜ್ಯದ ವಾಯುವ್ಯ ಭಾಗಕ್ಕಿದೆ. ಈ ಜಿಲ್ಲೆಯಲ್ಲಿ ಹತ್ತು ತಾಲ್ಲೂಕುಗಳಿವೆ. ಅವುಗಳೆಂದರೆ:

೧. ಚಿಕ್ಕೋಡಿ ೨. ಹುಕ್ಕೇರಿ ೩. ಗೋಕಾಕ್ ೪. ಬೆಳಗಾವಿ ೫. ಅಥಣಿ ೬. ರಾಯಭಾಗ ೭. ಸವದತ್ತಿ ೮. ರಾಮದುರ್ಗ ೯. ಖಾನಾಪುರ ಮತ್ತು ೧೦. ಬೈಲಹೊಂಗಲ

ಪಶ್ಚಿಮದಿಂದ ಪೂರ್ವಕ್ಕೆ ಜಿಲ್ಲೆಯ ಭೂ ಪ್ರದೇಶ ಇಳಿಜಾರಾಗಿದೆ. ಪೂರ್ವಭಾಗ ಫಲವತ್ತಾಗಿದೆ. ಪಶ್ಚಿಮದಲ್ಲಿ ದಟ್ಟವಾದ ಅರಣ್ಯಗಳಿವೆ. ಬಯಲು ಪ್ರದೇಶ ಮತ್ತು ಮಲೆನಾಡಿನ ಪ್ರದೇಶಗಳೆರಡೂ ಜಿಲ್ಲೆಯಲ್ಲಿ ಕಂಡುಬರುತ್ತವೆ. ಮಲಪ್ರಭ, ಘಟಪ್ರಭ, ದೋಣಿ ತೀರ್ಥ ನದಿಗಳು ಹರಿಯುತ್ತವೆ. ಮಲಪ್ರಭ ನದಿಯ ನವಿಲುತೀರ್ಥ ಜಲಾಶಯ ನೀರಾವರಿಗೆ ಅನುಕೂಲಕರವಾಗಿದೆ.

ಭತ್ತ, ಕಬ್ಬು, ಜೋಳ, ತಂಬಾಕು, ಮೆಣಸಿನಕಾಯಿ, ಸಜ್ಜೆ ಮತ್ತು ದ್ವಿದಳ ಧಾನ್ಯಗಳು, ತರಕಾರಿಗಳು ಇಲ್ಲಿನ ಮುಖ್ಯ ಬೆಳೆಗಳು. ಕೈಗಾರಿಕೆಗಳಲ್ಲೂ ಈ ಜಿಲ್ಲೆ ಮುಂದುವರಿದಿದೆ. ಅಲ್ಯೂಮಿನಿಯಂ ಕಾರ್ಖಾನೆ, ಬಟ್ಟೆ ಕಾರ್ಖಾನೆ ಮತ್ತು ಸಕ್ಕರೆ ಕಾರ್ಖಾನೆಗಳು ಬಹಳ ಇವೆ. ಯಂತ್ರೋಪಕರಣಗಳು ಉಕ್ಕಿನ ಉಪಯುಕ್ತ ವಸ್ತುಗಳು, ಪಿಂಗಾಣಿ ಸಾಮಾನಿನ ಕಾರ್ಖಾನೆಗಳೂ ಇವೆ. ಗೋಕಾಕ್ ತಾಲ್ಲೂಕು ಬಣ್ಣದ ವಸ್ತುಗಳ ತಯಾರಿಕೆಗೆ ಹೆಸರಾಗಿದೆ.

ಪುರಾಣ ಪ್ರಸಿದ್ಧ ಸ್ಥಳಗಳು ಬೆಳಗಾವಿ ಜಿಲ್ಲೆಯಲ್ಲಿ ಬಹಳ. ಬೆಳಗಾವಿ ಹಿಂದೆ ರಾವಣನ ದಂಡಕಾರಣ್ಯ ಪ್ರದೇಶವಾಗಿತ್ತಂತೆ. ಜಿಲ್ಲೆಯ ಸವದತ್ತಿ ಎಲ್ಲಮ್ಮನ ಗುಡ್ಡ, ಜಮದಗ್ನಿ-ರೇಣುಕೆ ಮತ್ತು ಪರಶುರಾಮನಿಗೆ ಸಂಬಂಧಿಸಿದ ಅನೇಕ ಕಥೆಗಳನ್ನು ಒಳಗೊಂಡಿದೆ. ಪ್ರತಿ ವರ್ಷ ಜಾತ್ರೆಯೂ ನಡೆಯುತ್ತದೆ. ಅಥಣಿಯ ಸಮೀಪ

ಕೃಷ್ಣಾನದಿಯ ದಡದಲ್ಲಿ ರಾಮತೀರ್ಥವಿದೆ. ಇಲ್ಲಿ ಸ್ನಾನ ಮಾಡಿದವರಿಗೆ ಪಾಪ ಪರಿಹಾರವಾಗುತ್ತದೆಂಬ ನಂಬಿಕೆಯಿದೆ. ಗಣೇಶನ ಹಬ್ಬ ಜಿಲ್ಲೆಯ ವಿಶೇಷ ಆಚರಣೆ.

೧೪. ಬಿಜಾಪುರ ಜಿಲ್ಲೆ

ಬಿಜಾಪುರ ಜಿಲ್ಲೆ ಕರ್ನಾಟಕ ರಾಜ್ಯದ ಉತ್ತರ ದಿಕ್ಕಿಗಿದೆ. ಬೆಳಗಾವಿ ಉಪವಿಭಾಗಕ್ಕೆ ಸೇರಿದೆ. ಈ ಜಿಲ್ಲೆಯಲ್ಲಿ ಹನ್ನೊಂದು ತಾಲ್ಲೂಕುಗಳಿವೆ. ಅವುಗಳೆಂದರೆ:

೧. ಬಿಜಾಪುರ ೨. ಇಂಡಿ ೩. ಸಿಂದಗಿ ೪. ಬಾದಾಮಿ ೫. ಬೀಳಗಿ ೬. ಬಸವನ ಬಾಗೇವಾಡಿ ೭. ಬಾಗಲಕೋಟೆ ೮. ಮುದ್ದೇಬಿಹಾಳ ೯. ಹುನಗುಂದ ೧೦. ಜಮಖಂಡಿ ೧೧. ಮುಧೋಳ

ಬಯಲು ಪ್ರದೇಶ ಹಾಗೂ ಒಣ ಶುಷ್ಕಪ್ರದೇಶ ಹೆಚ್ಚಾಗಿ ಕಂಡುಬರುತ್ತದೆ. ಇಲ್ಲಿನ ಹವೆ ಹಿತಕರವಾಗಿರುತ್ತದೆ. ಭೀಮಾ, ಕೃಷ್ಣಾ, ದೋಣಿ, ಮಲಪ್ರಭಾ ಮತ್ತು ಘಟಪ್ರಭಾ ನದಿಗಳು ಜಿಲ್ಲೆಯಲ್ಲಿ ಹರಿಯುವ ನದಿಗಳು. ಇಲ್ಲಿನ ಭೂಪ್ರದೇಶ ಫಲವತ್ತಾಗಿದ್ದು ವ್ಯವಸಾಯಕ್ಕೆ ಯೋಗ್ಯವಾಗಿದೆ. ನೀರಾವರಿ ಸೌಲಭ್ಯ ಹೆಚ್ಚಾಗಿದ್ದರೂ ಜಿಲ್ಲೆಯಲ್ಲಿ ಆಧುನಿಕ ನೀರಾವರಿ ಪದ್ಧತಿಯನ್ನು ಜನ ಅನುಸರಿಸುತ್ತಿಲ್ಲ.

ಜೋಳ ಈ ಜಿಲ್ಲೆಯ ಮುಖ್ಯ ಬೆಳೆ. ಕಬ್ಬು, ಗೋಧಿ, ಹತ್ತಿ, ಹೊಗೆಸೊಪ್ಪು, ಅರಿಸಿನ, ಕೊತ್ತುಂಬರಿ ಬೀಜ ಇತ್ಯಾದಿ ಇಲ್ಲಿನ ಬೆಳೆಗಳು. ಜಿಲ್ಲೆಯಲ್ಲಿ ಖನಿಜಸಂಪತ್ತು ಹೆಚ್ಚಾಗಿಲ್ಲ. ದೊಡ್ಡ ಪ್ರಮಾಣದ ಕೈಗಾರಿಕೆಗಳೂ ಕಂಡುಬರುವುದಿಲ್ಲ.

ಹಿಂದೆ ಬಿಜಾಪುರ ಜಿಲ್ಲೆಯ ಬಾದಾಮಿ ಚಾಲುಕ್ಯರ ರಾಜಧಾನಿಯಾಗಿತ್ತು. ಬಿಜಾಪುರ ಅನೇಕ ರಾಜವಂಶಗಳ ಆಳ್ವಿಕೆಯಲ್ಲಿತ್ತು. ಬಿಜಾಪುರದ ಸುಲ್ತಾನರು ಬಹಳ ವರ್ಷಗಳ ಕಾಲ ರಾಜ್ಯಭಾರ ಮಾಡಿದ್ದಾರೆ. ಇಬ್ರಾಹಿಂ ಆದಿಲ್‌ಶಾಹಿ ಸುಲ್ತಾನರಲ್ಲಿ ಪ್ರಸಿದ್ಧನಾದವನು. ಗೋಳಗುಮ್ಮಟ, ಕೋಟೆ ಇತ್ಯಾದಿ ಸ್ಥಳಗಳು

ಬಿಜಾಪುರದಲ್ಲಿ ಇಂದಿಗೂ ಆಕರ್ಷಕವಾಗಿವೆ. ಜಿಲ್ಲೆಯ ಐಹೊಳೆ, ಬಾದಾಮಿ ಮತ್ತು ಪಟ್ಟದಕಲ್ಲುಗಳು, ಗುಹಾಂತರ ದೇವಾಲಯಗಳಿಗೆ ಹೆಸರಾಗಿವೆ. ಬಸವನ ಬಾಗೇವಾಡಿ ಒಂದು ಪುಣ್ಯಕ್ಷೇತ್ರ. ಇದು ಬಸವಣ್ಣನವರ ಜನ್ಮಸ್ಥಳ. ಇದೇ ಜಿಲ್ಲೆಯ ಕೂಡಲಸಂಗಮದಲ್ಲಿ ಬಸವಣ್ಣನವರ ಆರಾಧ್ಯದೈವ ಕೂಡಲಸಂಗಮ ದೇವಾಲಯವಿದೆ. ಪ್ರತಿ ವರ್ಷವೂ ಇಲ್ಲಿ ಜಾತ್ರೆ ನಡೆಯುತ್ತದೆ.

೧೫. ಧಾರವಾಡ ಜಿಲ್ಲೆ

ಧಾರವಾಡ ಜಿಲ್ಲೆಯು ರಾಜ್ಯದ ವಾಯುವ್ಯ ಭಾಗದಲ್ಲಿದೆ. ಮತ್ತು ಹದಿನೇಳು ತಾಲ್ಲೂಕುಗಳನ್ನು ಒಳಗೊಂಡಿದೆ. ಅವುಗಳೆಂದರೆ:

೧. ಧಾರವಾಡ ೨. ಬ್ಯಾಡಗಿ ೩. ಗದಗ ೪. ಹಾನಗಲ್ಲು ೫. ಹಾವೇರಿ ೬. ಹಿರೇಕೆರೂರು ೭. ಹುಬ್ಬಳ್ಳಿ ೮. ಕಲಘಟಗಿ ೯. ಕುಂದಗೋಳ ೧೦. ಮುಂಡರಗಿ ೧೧. ನರಗುಂದ ೧೨. ನವಲಗುಂದ ೧೩. ರಾಣಿಬೆನ್ನೂರು ೧೪. ರೋಣ ೧೫. ಸವಣೂರು ೧೬. ಶಿಗ್ಗಾಂವಿ ೧೭. ಶಿರಹಟ್ಟಿ

ಭೂಪ್ರದೇಶ ಪಶ್ಚಿಮದಿಂದ ಪೂರ್ವಕ್ಕೆ ಇಳಿಜಾರಾಗಿದ್ದು ಪೂರ್ವದಲ್ಲಿ ಬಯಲುಪ್ರದೇಶ ಮತ್ತು ಪಶ್ಚಿಮದಲ್ಲಿ ಗುಡ್ಡಗಾಡು ಪ್ರದೇಶಗಳು ಕಂಡು ಬರುತ್ತದೆ. ಇವೆರಡನ್ನು ಬೆಳವಲನಾಡು ಮತ್ತು ಮಲೆನಾಡುಗಳೆಂದು ಹೆಸರಿಸಬಹುದು. ಜಿಲ್ಲೆಯಲ್ಲಿ ಮಳೆ ಕಡಿಮೆ. ಆದರೂ ನದಿಗಳು ಹರಿಯುವುದರಿಂದ ನೀರಾವರಿ ಸೌಲಭ್ಯ ಚೆನ್ನಾಗಿದೆ. ತುಂಗಭದ್ರಾ, ಮಲಪ್ರಭಾ, ವರದ, ಕುಮುದ್ವತಿ ಮತ್ತು ಬೆಣ್ಣೆಹಳ್ಳ ಇಲ್ಲಿನ ಮುಖ್ಯ ನದಿಗಳು. ಈ ನದಿಗಳ ಜಲಾಶಯಗಳು ಮತ್ತು ಕೆರೆಗಳ ನೀರು ವ್ಯವಸಾಯಕ್ಕೆ ಬಳಕೆಯಾಗುತ್ತದೆ.

ಈ ಜಿಲ್ಲೆಯ ಮುಖ್ಯ ಕಸುಬು ವ್ಯವಸಾಯ. ಭತ್ತ, ಕಬ್ಬು, ಗೋಧಿ, ಹತ್ತಿ, ಅಡಿಕೆ ಮತ್ತು ವೀಳೆದೆಲೆ ಮುಖ್ಯ ಬೆಳೆಗಳು. ಪುಂಡಿ, ಅಂಬಾಡಿ, ಸೆಣಬು ಇತ್ಯಾದಿ ನಾರಿನ ಬೆಳೆಗಳೂ ಇವೆ.

ಶಿಕ್ಷಣ ಕ್ಷೇತ್ರದಲ್ಲೂ ಧಾರವಾಡ ಜಿಲ್ಲೆ ಪ್ರಗತಿ ಸಾಧಿಸಿದೆ. ಕರ್ನಾಟಕ ವಿಶ್ವವಿದ್ಯಾಲಯ, ಕೃಷಿ ವಿಶ್ವವಿದ್ಯಾಲಯ ಮತ್ತು ತಾಂತ್ರಿಕ ಶಿಕ್ಷಣ ಕಾಲೇಜು, ವೈದ್ಯಕೀಯ ಕಾಲೇಜು ಹಾಗೂ ನ್ಯಾಯ ಶಿಕ್ಷಣ ಕಾಲೇಜುಗಳಿವೆ. ವ್ಯಾಪಾರ, ವಾಣಿಜ್ಯ ಹಾಗೂ ಆರ್ಥಿಕ ರಂಗಗಳಲ್ಲಿ ಧಾರವಾಡ ಜಿಲ್ಲೆಯು ಯಶಸ್ವಿಯಾಗಿದೆ.

೧೬. ಉತ್ತರ ಕನ್ನಡ ಜಿಲ್ಲೆ

ಉತ್ತರ ಕನ್ನಡ ಜಿಲ್ಲೆ ಕರ್ನಾಟಕದ ವಾಯುವ್ಯ ಭಾಗದಲ್ಲಿದೆ. ಈ ಜಿಲ್ಲೆಯಲ್ಲಿ ಹನ್ನೊಂದು ತಾಲ್ಲೂಕುಗಳಿವೆ. ಅವುಗಳೆಂದರೆ:

೧. ಕಾರವಾರ ೨. ಸೂಪ ೩. ಹಳಿಯಾಳ ೪. ಯಲ್ಲಾಪುರ ೫. ಮುಂಡಗೋಡ ೬. ಶಿರಸಿ ೭. ಸಿದ್ಧಾಪುರ ೮. ಭಟ್ಕಳ ೯. ಹೊನ್ನಾವರ ೧೦. ಕುಮಟಾ ೧೧. ಅಂಕೋಲ

ಕಾರವಾರ ಜಿಲ್ಲೆಯ ಆಡಳಿತ ಕೇಂದ್ರ. ಜಿಲ್ಲೆಗೆ ಸಂಬಂಧಿಸಿದ ಆಡಳಿತ ಮತ್ತು ವ್ಯವಹಾರ ಇಲ್ಲಿ ನಡೆಯುತ್ತದೆ. ಎರಡು ರೀತಿಯ ಭೌಗೋಳಿಕ ಲಕ್ಷಣಗಳನ್ನು ಈ ಜಿಲ್ಲೆಯಲ್ಲಿ ಗುರ್ತಿಸಬಹುದು. ಅವುಗಳೆಂದರೆ ಸಮುದ್ರದ ಅಂಚಿಗೆ ಸಮೀಪವಾಗಿರುವ ಕರಾವಳಿ ಪ್ರದೇಶ. ಇದನ್ನು ಘಟ್ಟದ ಕೆಳಗಿನ ಭಾಗ ಎನ್ನುತ್ತಾರೆ. ಮತ್ತೊಂದು ಘಟ್ಟದ ಮೇಲಿನ ಭಾಗ. ಇದು ಕರಾವಳಿಯ ಪೂರ್ವ ಮಗ್ಗುಲಿನ ಪ್ರದೇಶ. ಕಾಳಿ, ಅಘನಾಶಿನಿ, ಗಂಗಾವತಿ ಮತ್ತು ಶರಾವತಿ ಈ ಜಿಲ್ಲೆಯ ಮುಖ್ಯ ನದಿಗಳು. ಈ ಎಲ್ಲ ನದಿಗಳಿಗೂ ಜಲಪಾತಗಳಿವೆ.

ಜಿಲ್ಲೆಯ ಬಹುಪಾಲು ಪ್ರದೇಶ ಕಾಡಿನಿಂದ ತುಂಬಿದೆ. ಭತ್ತ, ತೆಂಗು, ಅಡಿಕೆ, ಏಲಕ್ಕಿ, ಮೆಣಸು ಮತ್ತು ಬಾಳೆ ಇಲ್ಲಿನ ಮುಖ್ಯ ಬೆಳೆಗಳು. ಕೈಗಾರಿಕೆಗಳಲ್ಲೂ ಈ ಜಿಲ್ಲೆ ಪ್ರಗತಿ ಸಾಧಿಸಿದೆ. ಕೂಡ್ಲಗಿಯಲ್ಲಿ ಮ್ಯಾಂಗನೀಸ್ ಗಣಿಗಳಿದ್ದರೆ ಯಾಣದಲ್ಲಿ ಕಬ್ಬಿಣದ ಅದಿರು ದೊರೆಯುತ್ತದೆ. ದಾಂಡೇಲಿಯ ಕಾಗದದ ಕಾರ್ಖಾನೆ ಜಿಲ್ಲೆಯ ದೊಡ್ಡ ಕೈಗಾರಿಕೆ.

ಗೋಕರ್ಣ, ಯಾಣ, ಉಳವಿ ಇತ್ಯಾದಿ ಸ್ಥಳಗಳು ಜಿಲ್ಲೆಯ ಪ್ರೇಕ್ಷಣೀಯ ಸ್ಥಳಗಳು. ಪ್ರಪಂಚದ ಮೂರು ನೈಸರ್ಗಿಕ ಬಂದರುಗಳಲ್ಲಿ ಕಾರವಾರವೂ ಒಂದು. ಸಾಹಿತ್ಯ ಕ್ಷೇತ್ರದಲ್ಲೂ ಉತ್ತರ ಕನ್ನಡ ಜಿಲ್ಲೆ ಮುಂದುವರಿದಿದೆ. ಸುಮಾರು ಮುನ್ನೂರು ವರ್ಷಗಳ ಹಿಂದೆ ವ್ಯಾಪಾರಕ್ಕಾಗಿ ಬಂದ ಪೋರ್ಚಗೀಸರ ಗುಲಾಮರಾದ ಸಿದ್ಧಿ ಜನ ಇಲ್ಲಿಯೇ ಉಳಿದಿದ್ದಾರೆ.

ವ್ಯವಸಾಯ, ವ್ಯಾಪಾರ, ಮೀನುಗಾರಿಕೆ ಇಲ್ಲಿನ ಜನರ ಮುಖ್ಯ ಕಸುಬು. ಅಲ್ಲದೆ ಜೇನು ಸಾಕಣೆಕೆ, ಕೋಳಿ ಸಾಕಣೆಕೆ, ಚಾಪೆ ಮತ್ತು ಬುಟ್ಟಿ ಹೆಣೆಯುವುದು ಇತರೆ ವೃತ್ತಿಗಳನ್ನು ವಿಶೇಷವಾಗಿ ಇಲ್ಲಿ ಗುರುತಿಸಬಹುದು.

೧೭. ಗುಲ್ಬರ್ಗ ಜಿಲ್ಲೆ

ಗುಲ್ಬರ್ಗ ಜಿಲ್ಲೆ ಕರ್ನಾಟಕದ ಉತ್ತರ ಭಾಗದಲ್ಲಿದೆ. ಈ ಜಿಲ್ಲೆಯಲ್ಲಿ ಹತ್ತು ತಾಲ್ಲೂಕುಗಳಿವೆ. ಅವುಗಳೆಂದರೆ:

೧. ಗುಲ್ಬರ್ಗ ೨. ಚಿತ್ತಾಪುರ ೩. ಅಫಜಲಪುರ ೪. ಅಳಂದ ೫. ಸೇಡಂ ೬. ಚಿಂಚೋಳಿ ೭. ಯಾದಗಿರಿ ೮. ಜೇವರ್ಗಿ ೯. ಶಾಹಪುರ ೧೦. ಸುರಪುರ

ಬಯಲು ಪ್ರದೇಶ ಹೆಚ್ಚಾಗಿ ಕಂಡುಬರುತ್ತದೆ. ಕೃಷ್ಣಾ, ಭೀಮಾ, ಅಮಜರ, ಕಾರಂಜಾ, ಮುಲ್ಲಾಮಾರಿ ಇವು ಜಿಲ್ಲೆಯ ಮುಖ್ಯ ನದಿಗಳು. ಕೃಷ್ಣಾ ಮತ್ತು ಭೀಮಾ ನದಿಗಳ ಜಲಾಶಯದ ಪ್ರದೇಶ ನೀರಾವರಿ ಸೌಲಭ್ಯ ಪಡೆದಿದೆ.

ಹತ್ತಿ, ಜೋಳ, ಸಜ್ಜೆ, ಭತ್ತ, ತೊಗರಿ, ಗೋಧಿ ಮತ್ತು ಶೇಂಗ ಈ ಜಿಲ್ಲೆಯ ಮುಖ್ಯ ಬೆಳೆಗಳು. ಖನಿಜಸಂಪತ್ತು ಹೇರಳವಾಗಿದೆ. ತಿಂತಿಣಿಯ ತಾಮ್ರದ ನಿಕ್ಷೇಪಗಳು ಬಹಳ ಪ್ರಸಿದ್ಧವಾಗಿವೆ. ಶಹಬಾದಿನ ಸಿಮೆಂಟ್ ಕಾರ್ಖಾನೆ, ಗುಲ್ಬರ್ಗಾದ ಜವಳಿ ಗಿರಣಿ ಮತ್ತು ಎಣ್ಣೆ ಗಿರಣಿಗಳು ಇಲ್ಲಿನ ದೊಡ್ಡ ಕೈಗಾರಿಕೆಗಳು.

ಜಿಲ್ಲೆಯ ಅಳಂದ ತಾಲ್ಲೂಕಿನ ನರೋಣ ಪುರಾಣ ಪ್ರಸಿದ್ಧ ಸ್ಥಳ. ತಿಂಥಿಣಿಯೂ ಒಂದು ಯಾತ್ರಾ ಸ್ಥಳ. ಇಲ್ಲಿನ ಮೋನೇಶ್ವರ ಸಮಾಧಿಗೆ ಹಿಂದೂ-ಮುಸ್ಲಿಂ ಎರಡೂ ಧರ್ಮಧವರು ಪೂಜೆ ಮಾಡುತ್ತಾರೆ. ಗುಲ್ಬರ್ಗದಲ್ಲಿ ಪ್ರತಿವರ್ಷವೂ ಶರಣ ಬಸವೇಶ್ವರ ಜಾತ್ರೆ ಹಾಗೂ ಖ್ವಾಜಾ ಬಂದೇ ನವಾಬರ ದರ್ಗಾದ ಉರುಸ್ ನಡೆಯುತ್ತವೆ. ಇತಿಹಾಸದಲ್ಲೂ ಈ ಜಿಲ್ಲೆ ಪ್ರಸಿದ್ಧವಾಗಿದೆ.(ಬಹಮನೀ ಸುಲ್ತಾನರ ಕಾಲದಲ್ಲಿ ಬಿಜಾಪುರ ರಾಜಧಾನಿಯಾಗಿತ್ತು. ಬಿಜಾಪುರದ ಕೋಟೆ ಮತ್ತು ಇತರ ಕಟ್ಟಡಗಳು ಆಕರ್ಷಕವಾಗಿವೆ.)

ವೈದ್ಯಕೀಯ ಕಾಲೇಜು, ಶಿಕ್ಷಣ ಕಾಲೇಜು ಹಾಗೂ ಗುಲ್ಬರ್ಗಾ ವಿಶ್ವವಿದ್ಯಾಲಯಗಳಿಂದ ಗುಲ್ಬರ್ಗ ಜಿಲ್ಲೆ ಶೈಕ್ಷಣಿಕ ಕ್ಷೇತ್ರದಲ್ಲೂ ಮುಂದುವರಿಯುತ್ತಿದೆ. ಇಲ್ಲಿನ ಜನರಿಗೆ ಕನ್ನಡವೇ ಅಲ್ಲದೆ ತೆಲುಗು ಮತ್ತು ಮರಾಠಿ ಭಾಷೆಗಳ ಪ್ರಭಾವವಿದೆ.

೧೮. ರಾಯಚೂರು ಜಿಲ್ಲೆ

ರಾಯಚೂರು ಜಿಲ್ಲೆ ಕರ್ನಾಟಕದ ಉತ್ತರದಲ್ಲಿ ಪೂರ್ವ ಭಾಗಕ್ಕಿದೆ. ಈ ಜಿಲ್ಲೆಯಲ್ಲಿ ಒಂಬತ್ತು ತಾಲ್ಲೂಕುಗಳಿವೆ. ಅವುಗಳೆಂದರೆ:

೧. ರಾಯಚೂರು ೨. ದೇವದುರ್ಗ ೩. ಗಂಗಾವತಿ ೪. ಕೊಪ್ಪಳ ೫. ಕುಷ್ಟಗಿ ೬. ಲಿಂಗಸೂಗೂರು ೭. ಮಾನ್ವಿ ೮. ಸಿಂಧನೂರು ೯. ಯಲಬುರ್ಗಿ

ಈ ಜಿಲ್ಲೆಯ ವಿಸ್ತೀರ್ಣ ಹದಿನಾಲ್ಕು ಸಾವಿರದ ಐದು ಚದರ ಕಿಲೋಮೀಟರುಗಳು ಹಾಗೂ ಜನಸಂಖ್ಯೆ ಹದಿನೇಳು ಲಕ್ಷದ ಎಂಬತ್ನಾಲ್ಕು ಸಾವಿರ. ಜಿಲ್ಲೆಯಾದ್ಯಂತ ಬಯಲು ಪ್ರದೇಶ ಹಾಗೂ ಅಲ್ಲಲ್ಲಿ ಹರಡಿದಂತೆ ಗುಡ್ಡಗಳು ಇವೆ. ಅರಣ್ಯ ಪ್ರದೇಶ ಇಲ್ಲಿ ಕಡಿಮೆ. ಮಳೆಯೂ ಕಡಿಮೆ. ಜಿಲ್ಲೆಯ ಉತ್ತರ ದಿಕ್ಕಿಗೆ ಕೃಷ್ಣಾನದಿ ಮತ್ತು ದಕ್ಷಿಣಕ್ಕೆ ತುಂಗಭದ್ರಾ ನದಿಗಳಿವೆ. ಈ ಜಲಾಶಯಗಳಿಂದ ಜಿಲ್ಲೆಯ ನೀರಾವರಿ ಬೇಸಾಯ ಸುಧಾರಿಸಿದೆ. ಜೋಳ, ಗೋಧಿ, ಸಜ್ಜೆ, ಭತ್ತ, ಹತ್ತಿ, ಕಡಲೆ, ತೊಗರಿ ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಾರೆ. ಖನಿಜ ಸಂಪತ್ತು ಜಿಲ್ಲೆಯಲ್ಲಿ ಹೇರಳವಾಗಿ ದೊರೆಯುತ್ತದೆ. ಆದರೆ ಹೆಚ್ಚಿನ ಸಂಖ್ಯೆಯ ಕೈಗಾರಿಕೆಗಳಿಲ್ಲ. ಲಿಂಗಸೂಗೂರು ತಾಲ್ಲೂಕಿನ 'ಹಟ್ಟಿ'ಯಲ್ಲಿ ಚಿನ್ನದಗಣಿ ಇದೆ.

ಪ್ರಾಚೀನ ನಾಗರೀಕತೆಯ ಅವಶೇಷಗಳು ಈ ಜಿಲ್ಲೆಯಲ್ಲಿ ಬಹಳ ದೊರೆಯುತ್ತವೆ. ಇತಿಹಾಸದಲ್ಲೂ ಜಿಲ್ಲೆಗೆ ಮಹತ್ವದ ಸ್ಥಾನವಿದೆ. ಕೊಪ್ಪಳದ ಬಳಿ ಅಶೋಕನ ಶಾಸನಗಳಿವೆ. ಗಂಗಾವತಿ ತಾಲ್ಲೂಕಿನ ಬೆಣಗಲ್ಲು ಬಂಡೆಗಳ ಮೇಲೆ ಹಿಂದಿನ ಕಾಲದ ರೇಖಾಚಿತ್ರಗಳಿವೆ. ಇಟಗಿಯಲ್ಲಿ ಚಾಲುಕ್ಯ ವಾಸ್ತುಶಿಲ್ಪದ ಸುಂದರ ದೇವಾಲಯವಿದೆ.

೧೯. ಬಳ್ಳಾರಿ ಜಿಲ್ಲೆ

ಬಳ್ಳಾರಿ ಜಿಲ್ಲೆ ರಾಜ್ಯದ ಮಧ್ಯಭಾಗದಲ್ಲಿ ಪೂರ್ವದ ಕಡೆಗೆ ಇದೆ. ಈ ಜಿಲ್ಲೆಯಲ್ಲಿ ಎಂಟು ತಾಲ್ಲೂಕುಗಳಿವೆ. ಅವುಗಳೆಂದರೆ:

೧. ಹರಪನ ಹಳ್ಳಿ ೨. ಬಳ್ಳಾರಿ ೩. ಹೊಸಪೇಟೆ ೪. ಹಗರಿಬೊಮ್ಮನಹಳ್ಳಿ ೫. ಹಡಗಲಿ ೬. ಕೂಡ್ಲಗಿ ೭. ಸಿರಿಗುಪ್ಪ ೮. ಸೊಂಡೂರು

ಇಲ್ಲಿ ಬಯಲು ಪ್ರದೇಶ ಕಡಿಮೆ. ಬೆಟ್ಟಗುಡ್ಡಗಳ ಪ್ರದೇಶ ಹಾಗೂ ಅರಣ್ಯಪ್ರದೇಶವೂ ಕಡಿಮೆ. ತುಂಗಭದ್ರಾ ಈ ಜಿಲ್ಲೆಯ ಪ್ರಮುಖ ನದಿ. ಈ ಜಲಾಶಯದಿಂದ ಜಿಲ್ಲೆಯ ಕೆಲವು ಭಾಗಗಳಿಗೆ ನೀರಾವರಿ ಸೌಲಭ್ಯ ಲಭಿಸಿದೆ. ವರ್ಷದ ಹೆಚ್ಚು ಕಾಲ ಇಲ್ಲಿ ಒಣಹವೆ ಇರುತ್ತದೆ. ಜೋಳ, ಭತ್ತ, ರಾಗಿ, ಸಜ್ಜೆ, ನೆಲಗಡಲೆ, ಹತ್ತಿ ಇತರೆ ಬೆಳೆಗಳನ್ನು ಬೆಳೆಯುತ್ತಾರೆ.

ಖನಿಜಸಂಪತ್ತು ಇಲ್ಲಿ ಹೇರಳವಾಗಿದೆ. ಕಬ್ಬಿಣ, ಮ್ಯಾಂಗನೀಸ್, ತಾಮ್ರ ಮತ್ತು ಸೀಸದ ಅದಿರಿನ ಗಣಿಗಳಿಗೆ ಈ ಜಿಲ್ಲೆ ಹೆಸರಾಗಿದೆ. ಹರಪನಹಳ್ಳಿ, ಸೊಂಡೂರು, ಹೊಸಪೇಟೆ ಮತ್ತು ಬಳ್ಳಾರಿ ತಾಲ್ಲೂಕುಗಳಲ್ಲಿ ಮ್ಯಾಂಗನೀಸ್ ಮತ್ತು ಕಬ್ಬಿಣದ ಅದಿರಿನ ನಿಕ್ಷೇಪಗಳಿವೆ. ಸಿರಗುಪ್ಪ, ಕಂಪ್ಲಿ ಮತ್ತು ಹೊಸಪೇಟೆಯಲ್ಲಿ ಸಕ್ಕರೆ ಕಾರ್ಖಾನೆಗಳಿವೆ.

ಇತಿಹಾಸ ಮತ್ತು ಪುರಾಣಕ್ಕೆ ಸಂಬಂಧಿಸಿದಂತೆ ಅನೇಕ ಸ್ಥಳಗಳನ್ನು ಬಳ್ಳಾರಿ ಜಿಲ್ಲೆಯಲ್ಲಿ ಗುರ್ತಿಸಬಹುದು. ಹೊಸಪೇಟೆ ತಾಲ್ಲೂಕಿನ ಹಂಪಿ ಹಿಂದೆ ವಿಜಯನಗರದ ಅರಸರ ರಾಜಧಾನಿಯಾಗಿತ್ತು. ಅನೇಕ ದಾಳಿಗಳ ಪರಿಣಾಮವಾಗಿ ಹಾಳು ಹಂಪೆಯಾಗಿ ಉಳಿಯಿತು. ಈಗ ಒಂದು ಪ್ರವಾಸಿ ಕೇಂದ್ರವಾಗಿದೆ. ಇಲ್ಲಿನ ದೇವಾಲಯಗಳು ವಾಸ್ತುಶಿಲ್ಪದ ದೃಷ್ಟಿಯಿಂದ ಅಮೂಲ್ಯವಾದಂಥವಾಗಿವೆ. ತುಂಗಭದ್ರಾ ಅಣೆಕಟ್ಟು ಸಹ ಮುಖ್ಯವಾದ ಆಕರ್ಷಕ ಸ್ಥಳ. ಈ ಜಿಲ್ಲೆಯಲ್ಲಿ ಗ್ರಾಮದೇವತೆಗಳು ಬಹಳ. ಜಾತ್ರೆ ಉತ್ಸವಗಳೂ ಹೆಚ್ಚಾಗಿ ನಡೆಯುತ್ತವೆ. ಮೈಲಾರದ ಜಾತ್ರೆ ಬಹು ಪ್ರಸಿದ್ಧವಾದುದು.

ಹೊಸದಾಗಿ ಪ್ರಾರಂಭವಾಗಿರುವ ಹಂಪೆಯ ಕನ್ನಡ ವಿಶ್ವವಿದ್ಯಾಲಯ ಕನ್ನಡ ನಾಡು-ನುಡಿಗೆ ಸಂಬಂಧಿಸಿದ ಸಂಶೋಧನೆಗಳಲ್ಲಿ ಯಶಸ್ವಿಯಾಗುತ್ತಿದೆ.

೨೦. ಬೀದರ್ ಜಿಲ್ಲೆ

ಬೀದರ್ ಜಿಲ್ಲೆ ಕರ್ನಾಟಕದ ಉತ್ತರ ತುದಿಯಲ್ಲಿದೆ. ಇದು ಗುಲ್ಬರ್ಗ ಉಪವಿಭಾಗಕ್ಕೆ ಸೇರಿದ ಜಿಲ್ಲೆ. ಐದು ತಾಲ್ಲೂಕುಗಳನ್ನು ಒಳಗೊಂಡಿದೆ. ಅವುಗಳೆಂದರೆ:

೧. ಔರಾದಾ ೨. ಬೀದರ್ ೩. ಭಾಲ್ಕಿ ೪. ಹುಮನಾಬಾದ್ ೫. ಬಸವಕಲ್ಯಾಣ

ಬಯಲು ಪ್ರದೇಶ ಹೆಚ್ಚಾಗಿದ್ದು ಇಲ್ಲಿ ಬೆಟ್ಟಗುಡ್ಡಗಳಿಲ್ಲ. ಮಳೆಯೂ ಕಡಿಮೆ ಮತ್ತು ಬೇಸಿಗೆಯಲ್ಲಿ ಉಷ್ಣತೆ ಹೆಚ್ಚಾಗಿರುತ್ತದೆ. ಗಂಡೋರಿ, ನಾಗಪಾಲ ಹುಡಗಿ, ಹಳ್ಳಿಖೇಡ ಇತ್ಯಾದಿ ನದಿಗಳು ಹರಿಯುತ್ತವೆಯಾದರೂ ಬೇಸಗೆಯಲ್ಲಿ ಬತ್ತಿಹೋಗುತ್ತವೆ. ಮಂಜರಾ ಮತ್ತು ಕಾರಂಜಾ ಈ ಜಿಲ್ಲೆಯ ಪ್ರಮುಖ ನದಿಗಳು.

ಜೋಳ ಈ ಜಿಲ್ಲೆಯ ಮುಖ್ಯ ಬೆಳೆ. ಸಜ್ಜೆ, ಗೋಧಿ, ಹತ್ತಿ, ಭತ್ತ, ಕಬ್ಬು ಇತ್ಯಾದಿ ಬೆಳೆಗಳೂ ಇವೆ. ದೊಡ್ಡ ಪ್ರಮಾಣದ ಕೈಗಾರಿಕೆಗಳು ಜಿಲ್ಲೆಯಲ್ಲಿ ಕಂಡುಬರುವುದಿಲ್ಲ. ಕೃಷಿ ಉಪಕರಣಗಳ ಕಾರ್ಖಾನೆ, ಖಂಡಸಾರಿ ಕಾರ್ಖಾನೆ, ಗೊಬ್ಬರದ ಕಾರ್ಖಾನೆ ಇತ್ಯಾದಿ ಸಣ್ಣಪ್ರಮಾಣದ ಕೈಗಾರಿಕೆಗಳಿವೆ.

ಈ ಜಿಲ್ಲೆಯ ಬಸವಕಲ್ಯಾಣ ಬಸವಣ್ಣನವರು ವೀರಶೈವ ಧರ್ಮವನ್ನು ಕಟ್ಟಿದ ಸ್ಥಳ. ಇದು ಯಾತ್ರಾಸ್ಥಳವೂ ಹೌದು. ಔರಾದ, ಹುಮನಾಬಾದ್, ಭಾಲ್ಕಿ ಇತ್ಯಾದಿ ಸ್ಥಳಗಳೂ ತೀರ್ಥಕ್ಷೇತ್ರಗಳಾಗಿವೆ. ಬೀದರ್ ನಗರವೂ ಸಹ ಪ್ರವಾಸಿಗರನ್ನು ಆಕರ್ಷಿಸುತ್ತದೆ. ನಗರದ ಸುತ್ತಲೂ ಅನೇಕ ಸ್ಥಳಗಳು ನೋಡಲು ಯೋಗ್ಯವಾಗಿವೆ. ಬೀದರ್ ತಾಲ್ಲೂಕಿನ ನಾನಕ್ ಝರಾದ ಉತ್ಸವ, ಝರಣಿಯ ನರಸಿಂಹ ಜಯಂತಿ ಇಲ್ಲಿನ ಮುಖ್ಯ ಉತ್ಸವಗಳು.

ಬೀದರ್ ಜಿಲ್ಲೆ ವ್ಯವಸಾಯ ಪ್ರಧಾನವಾದುದು. ಇಲ್ಲಿನ ಜನ ಬಹುಭಾಷಿಗಳು. ಕನ್ನಡವೇ ಅಲ್ಲದೆ ತೆಲುಗು, ಮರಾಠಿ ಮತ್ತು ಉರ್ದು ಭಾಷೆಗಳನ್ನು ಬಲ್ಲವರು.

ಇಪ್ಪತ್ತು ಜಿಲ್ಲೆಗಳನ್ನೊಳಗೊಂಡ ಕರ್ನಾಟಕ ರಾಜ್ಯ ಅಭಿವೃದ್ಧಿಯ ಕ್ಷೇತ್ರಗಳಲ್ಲಿ ಹೆಸರು ಪಡೆದಿದೆ. ರಾಜ್ಯದ ಜನರ ಮುಖ್ಯ ಕಸುಬು ವ್ಯವಸಾಯ. ರೇಷ್ಮೆ, ಕಾಫಿ, ಅಡಿಕೆ, ಹಿಪ್ಪುನೇರಳೆ. ಬೆಳೆಗಳಲ್ಲಿ ಭಾರತದಲ್ಲೇ ಮೊದಲ ಸ್ಥಾನ ಕರ್ನಾಟಕದ್ದು. ಗಂಧದ ನಾಡು ಎಂದೇ ಪ್ರಸಿದ್ಧವಾಗಿರುವ ರಾಜ್ಯ ನಮ್ಮದು. ಭಾರತದ ಎಲೆಕ್ಟ್ರಾನಿಕ್ ರಾಜಧಾನಿ ಎಂಬ ಹೆಸರು ಪಡೆದಿರುವ ಬೆಂಗಳೂರು ಅತಿ ದೊಡ್ಡ ಕೈಗಾರಿಕಾ ಪ್ರದೇಶವಾಗಿದೆ.

ಸಾಹಿತ್ಯ, ಕಲೆ, ಸಂಗೀತ ಹಾಗೂ ಭವ್ಯ ಇತಿಹಾಸವನ್ನು ಕರ್ನಾಟಕ ಒಳಗೊಂಡಿದೆ. ಇಲ್ಲಿನ ಜನ ಸ್ನೇಹಜೀವಿಗಳು ಮತ್ತು ಪರೋಪಕಾರದ ಬುದ್ಧಿಯುಳ್ಳವರು. ಹೊರಗಿನ ಜನ ಕರ್ನಾಟಕಕ್ಕೆ ಬಹು ಬೇಗ ಆಕರ್ಷಿತರಾಗುತ್ತಾರೆ. ಹೀಗಾಗಿ ಒಮ್ಮೆ ಬಂದು ಇಲ್ಲಿ ನೆಲೆಸಿದವರು ಸಾಮಾನ್ಯವಾಗಿ ಇಲ್ಲಿಯೇ ಇದ್ದುಬಿಡುತ್ತಾರೆ. ಆದ್ದರಿಂದ ನೆರೆ-ಹೊರೆಯ ರಾಜ್ಯಗಳ ಪ್ರಭಾವಕ್ಕೆ ಕರ್ನಾಟಕ ರಾಜ್ಯ ಒಳಪಟ್ಟಿದೆಯೆನ್ನಬಹುದು.

* * *

ಕನ್ನಡ ವಿಶ್ವವಿದ್ಯಾಲಯವು ನ ಉತ್ತಮ
ಹಾಗೂ ಉಪಯುಕ್ತವಾದ ರಚನಾ
ವಿಭಾಗ'ವನ್ನು ತೆರೆದಿದೆ. ರಚನೆ
ಮಾಡಬೇಕೆಂದು ಚಿಂತಿಸುತ್ತಿ ರರಿಗಾಗಿ
ಪುಸ್ತಕ ಬರೆಸುವ ತಮ್ಮಲ್ಲಿ ಟ್ಟರು.
ವಿಶ್ವವಿದ್ಯಾಲಯವು ಈ ಯೊ ರಕರನ್ನು,
ಭಾಷಾತಜ್ಞರನ್ನು, ಶಿಕ್ಷಣತಜ್ಞ ಪ್ರಾಯ,
ಸಲಹೆ, ಸಹಕಾರಗಳನ್ನು ಕೇ ವಿನ್ಯಾಸ,
ಚಿತ್ರಗಳ ಮಹತ್ವ, ಸಾಹಿತ್ಯ ಚರ್ಚಿಸಿ
ಯೋಜನೆಯನ್ನು ಅನುಷ್ಠಾನ

ನವಸಾಕ್ಷರರಿಗಾಗಿ ಕನ್ನಡದ ರಾಗಿರುವ
ಪುಸ್ತಕಗಳನ್ನೆಲ್ಲ ಒಟ್ಟುಗ ತಜ್ಞರಿಂದ
ಪರಿಶೀಲಿಸಲಾಯಿತು. ಜೊತ ಅವರಿಗೆ
ಕಮ್ಮಟಗಳನ್ನು ನಡೆಸಿ, ಜಿಲ್ಲೆ,
ತಾಲೂಕುಗಳಿಗೆ ಕಳುಹಿಸಿ ದ ಅದರ
ಗುಣದೋಷಗಳ ಬಗ್ಗೆ ಅಭಿ ್ಯಾಲಯದ
ಗಣಕಯಂತ್ರದಲ್ಲಿ ವಿಶ್ಲೇಷಿ ನೀಡಿದ್ದ
ಮಾಹಿತಿಗಳನ್ನೆಲ್ಲ ಮರು ಪ ವಿಷಯದ
ಆದ್ಯತೆಗಳನ್ನು ನಿರ್ಧರಿಸಿಕೊ ನಮ್ಮ
ವಿಶ್ವವಿದ್ಯಾಲಯದ ಪ್ರಾಧ್ಯಾ ಕೊಟ್ಟರು.
ಕಲಾವಿದರು ವಿಷಯಗಳಿಗೊಪ್ಪುವ ಚಿತ್ರಗಳನ್ನು ಬರೆದುಕೊಟ್ಟರು. ಹೀಗೆ ಸಿದ್ಧಗೊಂಡ ಹಸ್ತಪ್ರತಿಗಳನ್ನು ನವಸಾಕ್ಷರರ ಬಳಿ ಕೊಂಡೊಯ್ದು ಅವರ ಮುಂದೆ ಪಠಿಸಿ ನಂತರ ಅವರ ಅಭಿಪ್ರಾಯ, ಪ್ರತಿಕ್ರಿಯೆಗಳನ್ನು ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊಳಿಸಲಾಯಿತು.

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರದಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿ ಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು